person referred to in the motion may seek redress in the competent forum. In view of these circumstances, I withhold my consent to the Adjournment Motion.

SRI C. M. ARUMUGAM.—Sir, the Hon. Minister for Revenue is here. He can make a statement.

SRI B. BASAVALINGAPPA.—Sir, Mr. Arumugam was not here when I made a statement. This is a action on a person who was a landlord having two houses in the locality. He wanted to construct another building to run a Hotel. The Law irrespective of caste, It must take its own course.

## Motion of Thanks on the Governor's Address
## (Debate Continued)

MR. SPEAKER.— Now let us take up the discussion on the Governor's Address. ಮಾನ್ಯ ಕಕ್ಕಿಲಾಯ ಅವರೇ ತಾವು ಮಾತನಾಡಿ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ...

SRI BHIMANNA KHANDRE.—Sir, I have not completed my speech on the Governor's Address.

MR. SPEAKER.—You have spoken for 45 minutes. At least I hav to give 10 minutes to others.

SRI BHIMANNA KHANDRE.—I am requesting you to give me an opportunity to speak on the Governor's Address.

MR. SPEAKER.—I want to know how many minutes you require?

SRI BHIMANNA KHANDRE.—You please give me 15 minutes. ಏಕೆಂದರೆ ನಾನು ಮಾತನಾಡುವಾಗ ಬೇಕಾದಷ್ಟು ಇಂಟರಪ್‌ಷನ್ ಆಯಿತು.

MR. SPEAKER.—I am permitting you to speak on the subject for 5 minutes.

† ಶ್ರೀ ಭೀಮಣ್ಣ ಖಂಡ್ರೆ(ಭಾಲ್ಕಿ).—ಮಾನ್ಯ ಸಿ.ಪಿ.ಐ. ಮೆಂಬರ್‌ರವರು ಲ್ಯಾಂಡ್ ಟ್ರಿಬ್ಯುನಲ್ ಬಗ್ಗೆ ಹೇಳುತ್ತಿದ್ದರು. ನಮ್ಮ ಮಾನ್ಯ ಸ್ನೇಹಿತರುಗಳೆಲ್ಲಾ ಗೌರ್ನರ್ ಕಾಲಕ್ಕೆ ಟ್ರಿಬ್ಯುನಲ್‌ನಲ್ಲಿ ಕೆಲಸ ಮಾಡುವುದಕ್ಕೆ ಯಾರೂ ಬೇಡ ಎಂದವರು ಈಗ ಅವರು ಅದಕ್ಕಾಗಿ ಬೇಡುತ್ತಿದ್ದಾರೆ. ನಾನಾದರೂ ಅಪೋಜಿಷನ್ ಮೆಂಬರ್ ಆಗಿ, ಟ್ರಿಬ್ಯುನಲ್ ಮೆಂಬರ್ ಆಗಿ ಕೆಲಸ ಮಾಡುವುದಕ್ಕೆ ನನಗೆ ಇಚೆ ಇಲ್ಲ. ಈ ಟ್ರಿಬ್ಯುನಲ್‌ನಲ್ಲಿರುವ ಮೆಂಬರ್‌ಗಳ ಬಗ್ಗೆ ಹೇಳಬೇಕೆಂದರೆ ಅವರು ತಕ್ಕಡಿ ಹಚ್ಚಿ ಜಡ್ಜ್‌ಮೆಂಟ್ ಮಾಡುವಾಗ ೧೦೦೦, ೨೦೦೦, ೩೦೦೦ ರೂಪಾಯಿಗಳನ್ನು ಒಂದು ಕೇಸಿಗೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಅಲ್ಲೆಲ್ಲಾ ಬಹಳ ಕರೆಪ್ಟ್ ಜನರೇ ಇದ್ದಾರೆ. ನಾವು ಈ ಬಗ್ಗೆ ಆಗಿಂದಾಗೆ ಸರ್ಕಾರದ

ವರೆಗೆ ತಿಳಿಸಿದ್ದರೂ ಸರ್ಕಾರದವರು ಅವರ ಮೇಲೆ ಯಾವ ಆಕ್ಷನ್ ಅನ್ನೂ ತೆಗೆದುಕೊಂಡಿಲ್ಲ. ಅವರು ಟ್ರಿಬ್ಯುನಲ್‌ನಲ್ಲಿ ಯಾವ ಒಳ್ಳೆಯ ಕೆಲಸವನ್ನೂ ಮಾಡಿಲ್ಲ. ಅದು ಅವರಿಗೆ ಬೇಕಾಗಿಲ್ಲ. ಅವರು ಏನು ಕೆಲಸ ಮಾಡಿದ್ದರೂ ವಿರುದ್ಧವಾಗಿ ಮಾಡಿದ್ದಾರೆ. ಆದರೂ ಈಗ ಏನಾಗುತ್ತಿದೆ ಎಂದರೆ ಸರ್ಕಾರ ದವರು ಅಂತಹವರಿಗೇ ಆಶ್ರಯ ಕೊಡುತ್ತಿದ್ದಾರೆ. ಈ ಬಗ್ಗೆ ಉದಾಹರಣೆಯನ್ನು ಕೊಡಬೇಕೆಂದರೆ ಭಾಲ್ಕಿ ಟ್ರಿಬ್ಯುನಲ್‌ನಲ್ಲಿ ಕೇಸ್ ನಂಬರ್. ಕೆ.ಎಲ್.ಆರ್.ಎಂ.: ಬಿಎಚ್‌ಕೆ: ಸಿಆರ್ ೭೨: ೭೪–೭೫ ಸಂ. ೩೧೮೫:೮೯ ಎಂದು ಇದೆ. ಎರಡನೆಯದು ಕೆ.ಎಲ್ ಆರ್.ಎಂ, ಬಿ.ಎಚ್.ಕೆ. ೨೯೫:೭೫ ಎಂದು ಇದೆ. ಅವರ ಹೆಸರುಗಳನ್ನು ಹೇಳಬೇಕೆಂದರೆ ಘಂಟಪ್ಪ ವರ್ಸಸ್ ಶಂಕರರಾವ್, ಶಕುಂತಲ ವರ್ಸಸ್ ಬಾಬುರಾವ್ ಇವರಿಗೆ ಇನ್ನೂ ಸರಿಯಾದ ನ್ಯಾಯ ದೊರಕಿಲ್ಲ. ಇದು ನೂರರಲ್ಲಿ ಒಂದು ಕೇಸ್ ಆಗಿದೆ. ಅಲ್ಲಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಇರುವ ಸದಸ್ಯರುಗಳೆಲ್ಲಾ ಲಾಯರ್‌ಗಳು ಇದ್ದಾರೆ. ಅವರ ವಿರುದ್ಧ ವಾಗಿ ಹೈಕೋರ್ಟ್ ಜಡ್ಜ್‌ಮೆಂಟ್ ಇದೆ. ಅವರು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಮೆಂಬರುಗಳಾಗಿದ್ದು ಬೋಗಸ್ ಟೆನೆಂಟ್‌ನ್ನು ಕ್ರಿಯೇಟ್ ಮಾಡಿ ಕೋರ್ಟ್‌ನಲ್ಲಿ ಕೇಸ್ ಫೈಲ್ ಮಾಡುತ್ತಿದ್ದಾರೆ. ಕೇಸ್ ನಂ. ಓ.ಎಸ್. ೧೯೨:೧೭೪ ಈ ಕೇಸ್ ಬಗ್ಗೆ ಭಾಲ್ಕಿಯ ಮುನ್ಸಿಫ್ ಕೋರ್ಟ್‌ನಲ್ಲಿ ಕೇಸ್ ಆಗಿದೆ. ಇದರಲ್ಲಿ ಅವರು ಸಾವಿರಾರು ರೂಪಾಯಿಗಳನ್ನು ತೆಗೆದುಕೊಂಡು ಬೋಗಸ್ ಟೆನೆಂಟ್ ಕ್ರಿಯೇಟ್ ಮಾಡಿ ಕೇಸ್ ಫೈಲ್ ಮಾಡಿದ್ದಾರೆ. ಈ ಬಗ್ಗೆ ನಿಜವಾದ ಟೆನೆಂಟ್ ೧೨ ವರ್ಷದಿಂದ ನನ್ನ ಹೆಸರು ರಿಕಾರ್ಡ್ ಆಪ್ ರೈಟ್‌ನಲ್ಲಿ ಸರಿಯಾಗಿ ಬರುತ್ತಾ ಇಲ್ಲ ಎಂದು ಹೇಳುತ್ತಿದ್ದಾನೆ. ಮತ್ತೊಬ್ಬ ಟ್ರಿಬ್ಯುನಲ್ ಮೆಂಬರ್ ಅದೇ ರೀತಿಯಲ್ಲೇ ಮಾಡುತ್ತಿದ್ದಾನೆ.

(ಶ್ರೀ ನಾಸಯ್ಯನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

MR. CHAIRMAN.—I want to know whether the subject matter is pending before the Munsiff Court.

SRI BHIMANNA KHANDRE.—It has been decided. ಆ ಪ್ರಕಾರ ಪಹಣಿ ಚೇಂಜ್ ಮಾಡಿ ಟೆನೆಂಟ್ ಹೆಸರಿನಲ್ಲಿ ಬರೆಸಬೇಕು ಎಂದು ಕೋರ್ಟ್ ಡಿಕ್ರಿ ತೆಗೆದುಕೊಂಡಿದ್ದರೂ ಸಹ ಆ ಟ್ರಿಬ್ಯುನಲ್ ಮೆಂಬರ್ ಆದನ್ನು ಬರೆಸಿ ತನ್ನ ಹತ್ತಿರ ಇಟ್ಟುಕೊಂಡು ಅವನ ಮಕ್ಕಳ ಹೆಸರಿನಲ್ಲಿ ಮತ್ತು ನೆಂಟರ ಹೆಸರಿನಲ್ಲಿ ಆದನ್ನು ಮಾಡಿಕೊಂಡು ಆ ತರಹ ಮಾಡಿದ್ದಾನೆ. ಇದರ ಬಗ್ಗೆ ಸರ್ಟಿಫೈಡ್ ಕಾಪಿ, ಮುನ್ಸಿಫ್ ಕೋರ್ಟ್‌ನ ಜಡ್ಜ್‌ಮೆಂಟ್ ಡಿಕ್ರಿ ಕಾಪಿ ಮತ್ತು ಲ್ಯಾಂಡ್ ಟ್ರಿಬ್ಯುನಲ್ ಜಡ್ಜ್‌ಮೆಂಟ್ ಕಾಪಿ ಎಲ್ಲವೂ ಆಗ ಲ್ಯಾಂಡ್ ರಿಫಾರಂಸ್ ಮಂತ್ರಿಗಳಾಗಿದ್ದವರಲ್ಲಿಗೆ ಹೋಯಿತು. ಅನಂತರ ಅದು ಮಾನ್ಯ ಮುಖ್ಯಮಂತ್ರಿಯವರಲ್ಲಿಗೂ ಹೋಯಿತು. ಡೆಪ್ಯುಟಿ ಕಮಿಷನರ್ ಅವರು ಅದನ್ನು ತರಿಸಿಕೊಂಡು ಎನ್‌ಕ್ವೈರಿ ಮಾಡಿ "These fellows are corrupt, They may be removed" ಎಂದು ಬರೆದಿದ್ದಾರೆ. ಆದರೆ ನಮ್ಮ ಸರ್ಕಾರದವರು ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಳ್ಳದೇ ಅವರಿಗೆ ೧೪ ತಿಂಗಳಿನಿಂದ ಆಶ್ರಯ ಕೊಟ್ಟು ಮತ್ತೆ ಅವರಿಗೆ ಜಡ್ಜ್‌ಮೆಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಅವರು ಇದರಿಂದ ಲಕ್ಷಾಂತರ ರೂಪಾಯಿಗಳನ್ನು ಮಾಡಿಕೊಂಡು ಇವತ್ತು ಸಮಾಜಪಾದ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಯವರು ಅವರನ್ನು ತೆಗೆದು ಹಾಕಿದ್ದಾರೆ ಎಂದು ಹೇಳಿದರು. ಆದರೆ ಆ ಬಗ್ಗೆ ಏನಾಗಿದೆ ಎಂಬುದು ಖಚಿತವಾಗಿ ಗೊತ್ತಾಗಿಲ್ಲ. ಅಂತಹ ಕೇಸ್‌ಗಳು ಬಂದಾಗ ಅದನ್ನು ಯಾರೂ ಕೇಳುವವರೂ ಇಲ್ಲ, ಮಾಡುವವರೂ ಇಲ್ಲ. ಈ ರೀತಿ ಅಲ್ಲಿ ಆಗುತ್ತಾ ಇದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಆಮೇಲೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ ಎಂದರೆ

4–30 P.M.

ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಏನಾಗುತ್ತಿದೆ ಎಂದರೆ ನಮ್ಮ ಗೌರ್ನರ್ ಸ್ಪೀಚ್ ಏನು ಇದೆ ಅದರಲ್ಲಿ ಸರ್ಕಾರದ ಧ್ಯೇಯ ಧೋರಣೆ ಏನು ಎಂಬುದನ್ನು ಹೇಳಿದ್ದಾರೆ. ಅದು ಯಾವುದು ಸರಿಯಾಗಿಲ್ಲವೆಂದು ನಾನು ಹೇಳುತ್ತೇನೆ. ನಮ್ಮ ಭಾರತ ದೇಶ ಬರೀ ಮಣ್ಣು ಕಲ್ಲು ಇರುವ ದೇಶವಲ್ಲ. ಇದರಲ್ಲಿ. ಮನುಷ್ಯರು ಇರುತ್ತಾರೆ ಎಂದು ಇದಕ್ಕೆ ಒಂದು ಸಂಸ್ಕೃತಿ ಹಾಗೂ ಸಂಪ್ರದಾಯಗಳು ಇವೆ. ಇವೆಲ್ಲವನ್ನೂ ಬಿಟ್ಟಿದ್ದಾರೆ. ನಮ್ಮ ಗೌರ್ನರ್ ಸ್ಪೀಚ್‌ನಲ್ಲಿ ಇರುವ ರೀತಿಯಿಂದ ನೋಡಿದರೆ

ಅದರಲ್ಲಿ ಎರಡು ಭಾಗ ಇದ್ದಂತೆ ಇದೆ. ಇವರು ಹೇಳುತ್ತಿರುವುದು ನಮ್ಮ ರಾಷ್ಟ್ರ ಜಾತ್ಯಾತೀತ ಹಾಗೂ ಒಂದು ಕಾಯಂ ಆದ ಪ್ರಜಾತಂತ್ರ ರಾಷ್ಟ್ರವೆಂದು. ಆದರೆ ಆ ರೀತಿ ವಾಸ್ತವವಾಗಿ ಇದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಇವತ್ತಿನ ದಿವಸ ನಡೆಯುತ್ತಿರುವ ಮದ್ಯಪಾನ, ಲಾಟರಿ, ಮಟಕ, ರೇಸು ಇವೇ ಮೊದಲಾದ ಬೇರೆ ಬೇರೆ ಅಸಮಾಜಿಕ ನಡವಳಿಕೆಗಳು ಹಾಗೂ ಅನೈತಿಕ ನಡವಳಿಕೆಗಳು ಏನು ನಡೆಯುತ್ತಿವೆ ಇವಕ್ಕೆ ಕಾರಣರು ಯಾರು? ಇನ್ನು ಹೆಣ್ಣುಮಕ್ಕಳನ್ನು ಮಾರಿಕೊಳ್ಳುವ ಪ್ರಸಂಗ ಬಂದಿದೆ ಇದಕ್ಕೆ ಯಾರು ಜವಾಬ್ದಾರರು ಎಂದು ಕೇಳಬೇಕಾಗುತ್ತದೆ, ಗೌರ್ನರ್ ಸ್ಪೀಚ್‌ನಲ್ಲಿ ಸರ್ಕಾರದ ಪಾಲಿಸಿ ಏನು ಇದೆ ಎಂಬುದನ್ನು ನಮೂದು ಮಾಡಿದ್ದಾರೆ. ಇವತ್ತಿನದಿವಸ ನಡೆಯುತ್ತಿರುವುದನ್ನು ನೋಡಿದರೆ ಆಡಳಿತದಲ್ಲಿ ಕರಪ್ಷನ್ ಹಾಗೂ ಕುಡಿತ ಜಾಸ್ತಿಯಾಗಿದೆ. ಇದನ್ನು ಯಾವರೀತಿ ದೂರ ದೂಡಬೇಕೋ ಗೊತ್ತಿಲ್ಲ. ಎಲ್ಲಿ ನೋಡಿದರೂ ಲಂಚ ರಷುವತ್ತು ತಾಂಡವಾಡುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ ಅದು ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ ಆರ್ಟಿಕಲ್ ೩೭ರಲ್ಲಿ ನಮೂದಾಗಿದೆ.

Article 37 says :

"The provisions contained in this Part shall not be enfoceable by any court, but the principles therein laid dowu are nevertheless fundamental in the governance of the country and it shall be the duty of the State to apply these principles in making laws."

Article 38 says:

"The State shall strive to promote the welfare of the people by securing and protecting as effectively as it may a social order in which justice, social, economic and political, shall inform all the institutions of the national life."

Article 39, clause (f) provides :

"The State shall, in particular, direct its policy towards securing—

.....................

(f) that childhood and youth are protected against exploitation and against moral and material abandonment ಇದು ಬಹಳ ಒಳ್ಳೆಯ ವಿಚಾರ ಅಧಿಕಾರವನ್ನು ಕೇಂದ್ರೀಕೃತ ಮಾಡದೆ ವಿಕೇಂದ್ರೀಕರಣ ಮಾಡಿ ಎಂದು ಕೇಂದ್ರದವರಿಗೆ ಹೇಳುತ್ತಿರುವುದನ್ನು ನಾವು ಒಪ್ಪಬೇಕಾಗುತ್ತದೆ. ಆದರೆ ಅದೇ ಸಮಯದಲ್ಲಿ ನಮ್ಮ ಸರ್ಕಾರದವರು ಲೋಕಲ್ ಬಾಡೀಸ್ ತಾಲ್ಲೂಕು ಬೋರ್ಡ್, ಕೋ-ಆಪರೇಟಿವ್ ಸೊಸೈಟಿ ಹಾಗೂ ವಿಲೇಜ್ ಪಂಚಾಯತ್ ಮಟ್ಟದಲ್ಲಿಯೂ ಕೂಡ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿದ್ದಾರೆಯೇ ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ಸಂಪೂರ್ಣವಾಗಿ ಎಲ್ಲಾ ಅಧಿಕಾರವನ್ನು ನಮ್ಮ ಸರ್ಕಾರದವರು ತಮ್ಮ ಕೈಯಲ್ಲಿ ಇಟ್ಟುಕೊಂಡು ಸೆಂಟ್ರಲ್ ಗೌರ್ನಮೆಂಟ್‌ನವರನ್ನು ರಾಜ್ಯಸರ್ಕಾರಕ್ಕೆ ಅಧಿಕಾರವನ್ನು ಕೊಡಬೇಕೆಂದು ಕೇಳುವುದಕ್ಕೆ ಹೊರಟಿದ್ದಾರೆ, ಇದು ನಾಚಿಕೆ ಪಡುವಂತಹ ವಿಷಯ ಎಂದು ಹೇಳುತ್ತೇನೆ.

......In para 9 of the Budget Speech it is stated:

"This is anomalous becuse scarcity relief operations involve substantial expenditure of an unforeseen and gratuitous nature. It would be difficult to repay such loans and the

> State Governments are faced with problems of ways and means and resources. It stands to reason that the Government of Indian's assistance to such operations should be entirely the form of grants.''

ಎಂದು ಹೇಳಿದ್ದಾರೆ. ಇದು ಗೌರ್ನಮೆಂಟ್ ಆಫ್ ಇಂಡಿಯಾ ಪ್ರಕಾರ ಸ್ಕೇರ್ಸಿಟಿ ಲೋನ್ ಗ್ರಾಂಟ್ ಎಂದು ತಿಳಿಯಬೇಕು. ಯಾವ ಪಿರಿಯಾಡಲ್ಲಿ ೧೯೭೨-೭೩ರಲ್ಲಿ ಡ್ರಾಟ್ ಕಂಡೀಷನ್ ಇತ್ತು ಅಂಥ ಕಡೆ ಬೀಜವನ್ನು ಹಂಚಿದ್ದಾರೆ. ಅದರ ಬೆಲೆ ೨ ರೂಪಾಯಿ ಇದ್ದರೆ ಅದನ್ನು ಇವರು ನಾಲ್ಕು ರೂಪಾಯಿ ನಂತೆ ಕೊಟ್ಟಿದ್ದಾರೆ. ಇದೆಲ್ಲಾ ಮಾಡಿ ಆಮೇಲೆ ಆ ಸಾಲದ ಹಣಕ್ಕೆ ಸುಸ್ತಿ ಬಡ್ಡಿ ಹಾಕಿ ಜಪ್ತಿ ಮಾಡುತ್ತಿದ್ದಾರೆ. ಮೊದಲು ಗ್ರಾಂಟ್ ಎಂದು ಹೇಳುತ್ತಿದ್ದರು. ಈ ರೀತಿ ಜನಗಳಿಂದ ದುಪ್ಪಟ್ಟು ಬಡ್ಡಿ ಸಮೇತ ಹಣ ವಸೂಲಿ ಮಾಡುತ್ತಿದ್ದಾರೆ. ಈ ಸರ್ಕಾರ ಎಲ್ಲಾ ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟು ಕೊಂಡು ಕೇಂದ್ರದವರನ್ನು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಎಂದು ಕೇಳುವುದರಲ್ಲಿ ಏನಾದರೂ ಅರ್ಥವಿದೆಯೇ? I would like to quote from the Chief Minister's speech in the National Development Council.

> "It is somewhat unfortunate that, against such a need the Centre-State relationship is tending towards too much centralisation. Several actions of the Centre are leading to regimentation and unhealthy control over the States, It is needless to say that they can only act as irritants.''

ಇದು ಸರಿಯಲ್ಲ. ವಾಸ್ತವವಾಗಿ ಇವರ ಕೆಲಸ ನೋಡಿದರೆ ಯಾವ ಪ್ರಕಾರ ಕಾನೂನು ತರುತ್ತಿದ್ದಾರೆ ಹಾಗೂ ತೀರ್ಮಾನಗಳನ್ನು ಮಾಡುತ್ತಿದ್ದಾರೆ ಎಂದು ಯಾವ ದೃಷ್ಟಿಯಿಂದ ನೋಡಿದರೂ ಗೊತ್ತಾಗುತ್ತಿಲ್ಲ. ಕೇಂದ್ರದಲ್ಲಿ ತುರ್ತುಸ್ಥಿತಿ ಹೋಗಿದ್ದರೂ ನಮ್ಮ ಸರ್ಕಾರದವರು ಇನ್ನೂ ಎಮರ್ಜೆನ್ಸಿಯನ್ನು ಇಟ್ಟುಕೊಂಡಿರುವಂತೆ ಕಾಣುತ್ತದೆ. ಇದನ್ನು ಮಾತ್ರ ಖಂಡಿತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ಆದರೆ ನಾನು ಕೂಡ ತಮ್ಮ ಮುಖಾಂತರ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡುವ ಉದ್ದೇಶದಿಂದ ಈ ಸದನದ ಮುಂದೆ ನಿಂತಿದ್ದೇನೆ. ಇವತ್ತು ನನ್ನ ಮತದಾರರ ಕ್ಷೇತ್ರದಲ್ಲಿ ರೈತರ ಪರಿಸ್ಥಿತಿಯ ಬಗ್ಗೆ ನೋಡಿದಾಗ ಅಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇಂಡಿ ತಾಲ್ಲೋಕು ಹಾಗೂ ಬಿಜಾಪುರ ಉತ್ತರ ಭಾಗಕ್ಕೆ ಮಳೆ ಸಕಾಲಕ್ಕೆ ಬಾರದೆ ಇರುವುದರಿಂದ ಹಿಂಗಾರಿ ಹಾಗೂ ಮುಂಗಾರಿ ಬೆಳೆಗಳು ಬರಲಿಲ್ಲ. ಅಲ್ಲಿನ ರೈತರು ಬಹಳ ಬಡವರು ಇದ್ದಾರೆ. ಅವರ ಪರಿಸ್ಥಿತಿ ಬಹಳ ಗಂಭೀರವಾಗಿದೆ ಆದ್ದರಿಂದ ನಾನು ಚುನಾಯಿತನಾದ ಮೇಲೆ ಪ್ರವಾಸ ಕೈಕೊಂಡಾಗ ಕಂಡದ್ದು ಏನು ಎಂದರೆ ನಮ್ಮ ರೆವಿನ್ಯೂ ಅಧಿಕಾರಿಗಳು, ತಹಸೀಲ್ದಾರ್ರು ರೈತರಿಂದ ತಕಾವಿ ಸಾಲವನ್ನು ವಸೂಲು ಮಾಡುವಾಗ ಹಾಗೂ ಸಹಕಾರಿ ಸಂಘಗಳ ಸಾಲವನ್ನು ವಸೂಲು ಮಾಡುವಾಗ ರೈತರ ಮೇಲೆ ಯಾವ ರೀತಿ ದಬ್ಬಾಳಿಕೆ ಮಾಡುತ್ತಿದ್ದಾರೆಂದು ನಾನು ಕಂಡು ಬಂದಿದ್ದೇನೆ.

ನಮ್ಮ ಕಡೆಯಲ್ಲಿ, ಜೋಳವಾಗಲಿಲ್ಲ, ಬೇರೆ ಇತರ ಕಾಳುಗಳಾಗಲಿಲ್ಲ ಯಾವುದೂ ಬೆಳೆಯದೆ ಇದ್ದಂಥ ಕಾಲದಲ್ಲಿ ಲೆವಿ ಕೊಡಬೇಕು ಎಂದು ಸರ್ಕಾರದವರು ಕೇಳುತ್ತಿದ್ದಾರೆ. ಸರ್ಕಾರಕ್ಕೆ ನಮ್ಮ ರೈತರು ಯಾವುದನ್ನೂ ಬೆಳೆದಿಲ್ಲ ಎನ್ನುವುದು ಗೊತ್ತಿದ್ದರೂ ಕೂಡ ಲೆವಿಯನ್ನು ವಸೂಲು ಮಾಡುತ್ತಿದ್ದಾರೆ. ಇವತ್ತಿನ ದಿವಸ ನಮ್ಮಲ್ಲಿ ಬಡ ಜನರು ಆಹಾರ ಸಿಗದೆ, ಕೂಲಿ ಸಿಕ್ಕಲಾರದೆ ತೊಂದರೆ ಪಡುತ್ತಾ ಇರುವಾಗ ಅವರನ್ನು ಒತ್ತಾಯದಿಂದ, ಜೋರಾಯದಿಂದ ಲೆವಿ ಕೊಡಿಯೆಂದು ವಸೂಲು ಮಾಡುವುದು ಸರಿಯಲ್ಲ. ಇದಲ್ಲದೆ, ಕಂದಾಯವನ್ನು ಸರ್ಕಾರದವರು ವಸೂಲು ಮಾಡುತ್ತಿದ್ದಾರೆ, ತಕಾವಿ ಸಾಲಗಳನ್ನು ವಸೂಲು ಮಾಡುತ್ತಿದ್ದಾರೆ. ಸಹಕಾರಿ ಬ್ಯಾಂಕುಗಳ ಸಾಲಗಳನ್ನು ವಸೂಲು ಮಾಡುತ್ತಿದ್ದಾರೆ. ಮಳೆ ಇಲ್ಲದಿರುವಾಗ ಬಿಜಾಪುರ ಜಿಲ್ಲಾ ಉತ್ತರ ಭಾಗದಲ್ಲಿ ಸಂಪೂರ್ಣವಾಗಿ ಬರಗಾಲ ಬಿದ್ದಿರತಕ್ಕ ಕಾಲದಲ್ಲಿ ಮತ್ತು ಹರಿಜನರು, ಗಿರಿಜನರು ಊಟಕ್ಕೆ ಸಿಕ್ಕದೆ, ಕೂಲಿ ಸಿಕ್ಕದೆ, ಊರುಗಳನ್ನು ಬಿಟ್ಟು ಮಹಾರಾಷ್ಟ್ರ ಗೂಳೆ ಹೋಗುತ್ತಿದ್ದಂಥ ಕಾಲದಲ್ಲಿ ಸರ್ಕಾರದವರು ಲೆವಿಯನ್ನು, ಮತ್ತು ಇತರ

ಸಾಲಗಳನ್ನು ವಸೂಲು ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಗೆತ್ತೆದಾರ, ಸಾಂಗ್ಲಿ ಇತರೆ ಜಿಲ್ಲೆಗಳಿಗೆ ಹೊಟ್ಟೆ ಸಾಗಿಸುವ ಸಲುವಾಗಿ ಬಡಜನರು ಗೂಳೆ ಹೋಗುತ್ತಿದ್ದಾರೆ. ಬಡವರ ಸಲುವಾಗಿ ಕೆಲಸ ಮಾಡುತ್ತಿರುವ ಸರ್ಕಾರ, ಬಡವರ ಹಿತಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಸರ್ಕಾರ ನಮ್ಮ ಕಡೆಯಲ್ಲಿ ಬಡವರ ಉದ್ಧಾರಕ್ಕಾಗಿ ಯಾವ ಕಾಂಗಾರಿಗಳನ್ನು ತೆಗೆದುಕೊಂಡಿಲ್ಲ ಎಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಒಂದು ರೂಪದಿಂದಲ್ಲ, ಎಲ್ಲಾ ರೂಪದಿಂದ ಅಲ್ಲಿ ಕೆಲಸಗಳನ್ನ ಪ್ರಾರಂಭಿಸಿಲ್ಲ. ಅಲಮಟ್ಟಿಯ ಅಪ್ಪರ್‌ಕೃಷ್ಣ ಮೇಲ್ದಂಡೆ ಯೋಜನೆ ಪ್ರಾರಂಭವಾಗಿ ೧೨-೧೩ ವರ್ಷಗಳಾದವು. ಅಲ್ಲಿ ಕೆಲಸ ಇನ್ನೂ ಸ್ಥಗಿತವಾಗಿದೆ. ನಾನು ಮೊನ್ನೆ ಅಲ್ಲಿ ಇನ್ಸ್‌ಪೆಕ್ಷನ್ ಮಾಡಿದಾಗ, ಈಗ ಮಾತ್ರ ಕೆಲಸ ಪ್ರಾರಂಭವಾಗಿದೆ. ಸುಮಾರು ೨೫ ಕೋಟಿ ರೂಪಾಯಿಗಳ ನೆರವನ್ನು ವಿಶ್ವ ಬ್ಯಾಂಕಿನವರು ಕೊಡಲಿಕ್ಕೆ ತಯಾರಾದರೂ ಕೂಡ ನಮ್ಮ ಸರ್ಕಾರದವರು ಇದರ ಬಗ್ಗೆ ತೀವ್ರತೆಯನ್ನು ತೆಗೆದುಕೊಂಡಿಲ್ಲ. ಲೆಫ್ಟ್ ಬ್ಯಾಂಕ್ ಚಾನಲ್ ಕಾರ್ಯವನ್ನು ತೆಗೆದುಕೊಂಡರೆ, ಬಿಜಾಪುರದ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಿಗೆ ನೀರಾವರಿಯ ಸೌಕರ್ಯ ಸಿಕ್ಕುತ್ತದೆ. ಕಳೆದ ೧೨-೧೩ ವರ್ಷಗಳಿಂದ ಇಲ್ಲಿ ಯಾವ ಕೆಲಸಗಳೂ ನಡೆಯದೆ ಇರುವುದರಿಂದ, ಕೆಲಸ ಸ್ಥಗಿತವಾಗಿದೆ. ಈಗಾಗಲೇ ಕೆಲವು ಭಾಗಗಳಲ್ಲಿ ಕಾಲುವೆಗಳನ್ನು ತೋಡಿದ್ದರೂ ಕೂಡ ಮುಚ್ಚಿ ಹೋಗಿವೆ. ಅಲ್ಲಿ ದುಷ್ಕಾಲ ಬಂದಿರುವುದರಿಂದ ಬಡ ಜನರಿಗೆ ಕೂಲಿ ಸಿಕ್ಕುವ ಸಲುವಾಗಿ, ದೀನದಲಿತರಿಗೆ ಅನುಕೂಲವಾಗುವ ಸಲುವಾಗಿ ಕಾಲುವೆಗಳನ್ನು ತೆಗೆಯಲಿಕ್ಕೆ ಒಡ್ಡುಗಳನ್ನು ಹಾಕಲಿಕ್ಕೆ ಸರ್ಕಾರ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಂಡರೆ ಅಲ್ಲಿರುವ ಬಡವರಿಗೆ ಕೂಲಿ ಸಿಕ್ಕುವ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಸುಮಾರು ೮೫ ಹಳ್ಳಿಗಳಲ್ಲಿ ನಾನು ನೋಡಿದ್ದೇನೆ. ಇವುಗಳ ಪೈಕಿ ೨೫ ಹಳ್ಳಿಗಳನ್ನು ಬಿಟ್ಟರೆ ಉಳಿದೆಲ್ಲಾ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಅಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇದರ ಬಗ್ಗ ನಾನು ರೂಲ್ ೩೧೨ರ ಕೆಳಗೆ ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಕಾರಣ ಏನೆಂದರೆ, ಅಲ್ಲಿ ಅನೇಕ ಯೋಜನೆಗಳನ್ನು ತೆಗೆದುಕೊಳ್ಳುವ ಸಲುವಾಗಿ ಸರ್ಕಾರದವರು ಯೋಜನೆಗಳನ್ನು ಶಿಫಾರಸ್ ಮಾಡಿದ್ದರೂ ಕೂಡ ಅಧಿಕಾರಿಗಳು ಅವುಗಳನ್ನು ಕಾರ್ಯರೂಪಕ್ಕೆ ತಂದಿಲ್ಲ. ನಮ್ಮ ಜಿಲ್ಲೆಯ ಹಿರೇಲಮಾಣಿ ಚಡಚಣ, ವರತಿ, ಜೇವೂರ, ಮುಂತಾದ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಮಳೆಗಾಲದಲ್ಲಿ ಅಲ್ಲಿ ನೀರು ಇಲ್ಲದೆ ಇರುವಾಗ, ಹೆಣ್ಣುಮಕ್ಕಳು ೨೪ ತಾಸವೂ ಗಡಿಗೆಗಳನ್ನು ಹೊತ್ತುಕೊಂಡು ಕಾಯಬೇಕಾಗಿದೆ. ರಾತ್ರಿ ಹಗಲೂ ಅವರು ನೀರಿಗಾಗಿ ನಿಂತುಕೊಳ್ಳುವಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಸರ್ಕಾರದವರು ಅಲ್ಲಿ ೩೦ ವರ್ಷಗಳಾದರೂ ಕೂಡ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡದೆ ಇರುವುದನ್ನು ನೋಡಿದರೆ ಇದು ಎಂಥಹ ವಿಪರ್ಯಾಸ ಎಂದೆನಿಸುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಕೂಡಲೇ ಒಂದು ಸಮಿತಿಯನ್ನು ನೇಮಿಸಿ ಸರಿಯಾದ ನೀರಿನ ಯೋಜನೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಬಿಜಾಪುರ ಉತ್ತರ ಭಾಗದಲ್ಲಿ ಬರಗಾಲ ಬಂದಿರುವುದರಿಂದ ಕೂಡಲೇ ಸರ್ಕಾರ ಲೆವಿ ವಸೂಲಿಯನ್ನು ಬಂದ್ ಮಾಡಬೇಕು. ಕಂದಾಯ, ಸಹಕಾರ ಸಾಲಗಳು ಏನು ಇವೆ ಅವೆಲ್ಲವನ್ನೂ ಕೂಡಲೇ ವಸೂಲಿ ಮಾಡುವುದನ್ನು ಮುಂದೂಡಬೇಕು ಎಂದು ನಾನು ಘನ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಜನತಾ ಯೋಜನೆಯ ಬಗ್ಗೆ ಒಂದು ಮಾತನ್ನು ನಾನು ಹೇಳಬೇಕಾಗಿದೆ. ಜನತಾ ಯೋಜನೆಯಲ್ಲಿ ಬಡಜನರಿಗೆ, ಮನೆಯಿಲ್ಲದವರಿಗೆ, ಹರಿಜನಗಿರಿಜನರಿಗೆ ೨೫೦೦ ರೂಪಾಯಿಗಳನ್ನು ಮನೆ ಕಟ್ಟುವ ಸಲುವಾಗಿ ಕೊಡುತ್ತಿದ್ದಾರೆ. ೨೫೦೦ ರೂಪಾಯಿಗಳಲ್ಲಿ ಒಂದು ಸಾವಿರ ರೂಪಾಯಿಗಳ ಸಬ್ಸಿಡಿ, ಒಂದು ಸಾವಿರ ರೂಪಾಯಿಗಳ ಸಾಲ, ಇನ್ನು ೫೦೦ ರೂಪಾಯಿಗಳ ಕಂಟ್ರಿಬ್ಯೂಷನ್. ಒಂದು ಸಾವಿರ ರೂಪಾಯಿಗಳಿಗೆ ಆರು ಪರ್ಸೆಂಟ್ ಬಡ್ಡಿಯನ್ನು ಕೊಟ್ಟು ೧೦ ವರ್ಷಗಳಲ್ಲಿ ಸಾಲವನ್ನು ತೀರಿಸಬೇಕು. ಆದರೆ ಇದರಲ್ಲಿ ಕಟ್ಟಿಸಿದ ಮನೆ ೬ ತಿಂಗಳಲ್ಲಿ ಬೀಳುವಂಥ ಪರಿಸ್ಥಿತಿ ಇರುತ್ತದೆ. ಜನತಾ ಯೋಜನೆಯಿಂದ ಬಡವರಿಗೆ ಅನುಕೂಲವಾಗಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದ್ದರೆ, ಅವರಿಗೆ ೨೫೦೦ ರೂಪಾಯಿಗಳಿಗೆ ಬದಲಾಗಿ ೫೦೦೦ ರೂಪಾಯಿಗಳನ್ನು ಕೊಟ್ಟರೆ ಅವರಿಗೆ ನಿಜವಾಗಿಯೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಜನತಾ ಯೋಜನೆಯಲ್ಲಿ ಮನೆಗಳನ್ನು ಊರಿಂದ ಹೊರಗಡೆ ಸರ್ಕಾರದವರು ಕಟ್ಟಿಸುತ್ತಿದ್ದಾರೆ. ಈ ರೀತಿಯಾಗಿ ಮಾಡಿದರೆ, ಹರಿಜನರನ್ನು ಇನ್ನೂ ಬೇರೆ ಸಮಾಜದವರಿಂದ ಹೊರಗೆ ಇಟ್ಟಂತಾಗುತ್ತದೆ ಎನ್ನುವುದನ್ನು ಸರ್ಕಾರದವರು ಗಮನಿಸಬೇಕು. ಅನ್‌ಟಚಬಿಲಿಟಿಗೆ ನಾವು ಆಶ್ರಯ ಕೊಟ್ಟಂತಾಗುತ್ತದೆ ಎಂದು ನಾನು ಇಲ್ಲಿ ಹೇಳಬೇಕಾಗಿದೆ.

ಇದನ್ನು ನಿವಾರಣೆ ಮಾಡುವ ಮಹಾ ಉದ್ದೇಶದಿಂದ ಬೇರೆ ಬೇರೆ ತಹಲ್‌ಗಳಲ್ಲಿ ಬಡವರಿಗೆ ಮನೆಗಳನ್ನು ಕಟ್ಟಿಸುವ ಯೋಜನೆಯನ್ನು ಬಿಟ್ಟು ಎಲ್ಲರೂ ಸಾಮುದಾಯಿಕವಾಗಿ ಜೀವನ ಮಾಡುವ ಹಾಗೆ ಎಲ್ಲಾ ವರ್ಗಗಳ ಜೊತೆಯಲ್ಲಿ ಈ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ನಾನು ಈ ಸಮಯದಲ್ಲಿ ಸೂಚನೆ ಮಾಡುತ್ತೇನೆ. ಈ ಮನೆಗಳನ್ನು ಕಟ್ಟುವುದಕ್ಕೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನ ಕಂಟ್ರಾಕ್ಟರಿಗೆ ಕೊಡುತ್ತಿದ್ದಾರೆ, ಇದು ಸರಿಯಲ್ಲ. ಇದಕ್ಕೆ ಬದಲಾಗಿ ಹೌಸಿಂಗ್ ಬೋರ್ಡಿನ ವತಿಯಿಂದ ಕಟ್ಟಿಸಿದರೆ ಒಳ್ಳೆಯದು ಎಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಅವರವರೇ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಎಸ್. ಅರಕೇರಿ.—ಸರಿಯಾಗಿ ಅವರು ಕಟ್ಟಿಕೊಳ್ಳುತ್ತಿಲ್ಲ. ಎರಡನೆಯದಾಗಿ. ಲೋ ಇನ್‌ಕಂ ಗ್ರೂಪ್ ಸ್ಕೀಂನಲ್ಲಿ ೧೨,೫೦೦ ರೂಪಾಯಿಗಳು ಹಟ್ಸ್ ಸ್ಕೀಂನಲ್ಲಿ ಬಡವರಿಗೆ ೨೫೦ ರೂಪಾಯಿ ಗಳನು ಕೊಡುತ್ತಿದ್ದಾರೆ. ನಮ್ಮ ಜಿಲ್ಲೆಯ ಚಡಚಣದಲ್ಲಿ ಸುಮಾರು ೨೦೦ ಗುಡಿಸಲುಗಳನ್ನು ಕಟ್ಟಿದ್ದಾರೆ. ಬರೀ ನಾಲ್ಕು ಕಂಬಗಳು ಬಿದಿರಿನ ಗಳಗಳನ್ನು ಹಾಕಿದ್ದಾರೆ, ಅವು ಸ್ಕೆಲಿಟನ್ ಮನೆಗಳು ಇದ್ದ ಹಾಗೆ ಇವೆ. ಕಳೆದ ಎರಡು ವರ್ಷಗಳಿಂದ ಆ ಮನೆಗಳಿಗೆ ಯಾರೂ ಹೋಗದೆ, ಅವು ಹಾಗೆಯೇ ಇವೆ.

ಈ ರೀತಿ ಮಾಡುವುದಾದರೆ ಬಡವರಿಗೆ ಕಣ್ಣೊರೆಸುವ ಯೋಜನೆ ಇದಾಗುತ್ತದೆಯೆ ಹೊರತು, ಯಾವ ಉದ್ದೇಶವೂ ಈಡೇರುವುದಿಲ್ಲ. ನೀವು ಎಲ್ಲಾ ಕಾಲದಲ್ಲ ಎಲ್ಲಾ ಜನರನ್ನೂ ಮೂರ್ಖರನ್ನಾಗಿ ಮಾಡಲಾಗುವುದಿಲ್ಲ. ಆದುದರಿಂದ, ಯೋಜನೆಯ ಉದ್ದೇಶ ಬಡ ಜನರಿಗೆ ಶೀಘ್ರಗತಿಯಲ್ಲಿ ತಲುಪುವ ಹಾಗೆ ಮತ್ತು ಅದು ಪರಿಣಾಮಕಾರಿಯಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಇಂದು ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ವ್ಯಾಪ್ತಿ ಕುರಿತು ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಸ್ವಾತಂತ್ರ್ಯ ಬಂದ ಇಪ್ಪತ್ತು ವರ್ಷಗಳ ತನಕ, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ವ್ಯಾಪ್ತಿ ಬಗ್ಗೆ ಪ್ರಶ್ನೆ ಉದ್ಭವವಾಗಿರಲಿಲ್ಲ. ಏಕೆಂದರೆ, ಆಗ ಭಾರತ ದೇಶದ ಇಪ್ಪತ್ತು ರಾಜ್ಯಗಳಲ್ಲೂ ಕಾಂಗ್ರೆಸ್ ಸರ್ಕಾರವಿತ್ತು. ಆದರೆ, ೧೯೬೭ರಲ್ಲಿ ತಮಿಳುನಾಡಿನಲ್ಲಿ ಕರುಣಾನಿಧಿಯವರು ಡಿ.ಎಂ.ಕೆ. ಪಕ್ಷದ ಮೂಲಕ ಮುಖ್ಯ ಮಂತ್ರಿಗಳಾದಾಗ ಅವರು, ತಮ್ಮ ರಾಜ್ಯಕ್ಕೆ ಹೆಚ್ಚು ಅಧಿಕಾರ ಕೊಡಬೇಕೆಂದು ಕೇಂದ್ರದವರನ್ನು ಕೇಳುತ್ತಿದ್ದರು. ಆಗ ಯಾರೂ ಅವರ ಕೋರಿಕೆಗೆ ಕಿವಿಗೊಡಲಿಲ್ಲ. ಆಗ ಕೇವಲ ಒಂದೇ ಒಂದು ವಿರೋಧ ಪಕ್ಷ ರಾಜ್ಯ ಸರ್ಕಾರವೊಂದರ ಆಡಳಿತವನ್ನು ನಡೆಸುತ್ತಿತ್ತು. ಆದರೆ, ಇಂದು ನಮ್ಮ ರಾಜ್ಯದ ಮುಖ್ಯ ಮಂತ್ರಿಯವರೂ ರಾಜ್ಯಗಳಿಗೆ ಹೆಚ್ಚಿನ ಅಧಿಕಾರವಿರಬೇಕು ; ರಾಜ್ಯಗಳಿಗೆ ಸ್ವಾಯತ್ತತೆ ನೀಡಬೇಕೆಂದು ಕೇಳುತ್ತಿದ್ದಾರೆ. ತಮಿಳುನಾಡಿನಲ್ಲಿ ಕರುಣಾನಿಧಿ ಸರ್ಕಾರವಿದ್ದಾಗ, ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಪಕ್ಷವೇ ಆಡಳಿತ ನಡೆಸುತ್ತಿದ್ದ ಇತರ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಸುಭೇದಾರರಂತೆ ನಡೆಸಿಕೊಳ್ಳುತ್ತಿದ್ದರು. ಔರಂಗಜೇಬನ ಆಡಳಿತದಲ್ಲಿ ಅಧಿಕಾರವಿಲ್ಲದ ಸುಭೇದಾರರಂತೆ ಇಂದಿರಾಗಾಂಧಿಯವರು ರಾಜ್ಯಗಳ ಮುಖ್ಯ ಮಂತ್ರಿಗಳನ್ನು ನಡೆಸಿಕೊಳ್ಳುತ್ತಿದ್ದರು. ಸರಿಸುಮಾರು ೧೯೬೬ ರಿಂದ ೧೯೭೭ ರವರೆಗೆ ಹತ್ತು ವರ್ಷಗಳ ಕಾಲ ಇಂದಿರಾ ಗಾಂಧಿಯವರು ರಾಣಿಯಾಗಿ, ಮುಖ್ಯ ಮಂತ್ರಿಗಳು ಅಧಿಕಾರವಿಲ್ಲದ ಸುಭೇದಾರ್‌ಗಳಾಗಿದ್ದರು ಇಂದು ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರ ಬಂದಿರುವುದರಿಂದ, ರಾಜ್ಯದ ವಿಕಾಸಕ್ಕೆ, ಯೋಜನೆಗಳ ಬೆಳವಣಿಗೆಗೆ ನಮಗೆ ಹೆಚ್ಚಿನ ಅಧಿಕಾರ ಕೊಡಿ ಎಂದು ದೇವರಾಜ ಅರಸು ಅವರು ಕೇಳುತ್ತಿದ್ದಾರೆ. ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬರುವ ಪೂರ್ವದಲ್ಲಿ, ನಾವು ಅಧಿಕಾರದ ವಿಕೇಂದ್ರೀಕರಣ ಮಾಡಿ ಎಲ್ಲಾ ರಾಜ್ಯಗಳಿಗೂ ಸಮಾನ ಅಧಿಕಾರಗಳನ್ನು ನೀಡುವೆವು ಎಂದು ಹೇಳಲಾಗಿತ್ತು. ಅದನ್ನೇ ದೊಡ್ಡದಾಗಿ ಮಾಡಿಕೊಂಡು, ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೇಳಲು ಹೋಗುತ್ತಿರುವುದು ಅಷ್ಟು ಉಚಿತವಲ್ಲ. ಜನತಾ ಸರ್ಕಾರ ಆ ಬಗ್ಗೆ ಕಮಿಟಿ ಮಾಡಿಕೊಂಡಿದೆ ; ರಾಜ್ಯಗಳ ವಿಕಾಸಕ್ಕೆ ಅನುಕೂಲವಾಗುವ ಹಾಗೆ ಮತ್ತು ಕೇಂದ್ರ ಮತ್ತು ರಾಜ್ಯಗಳ ನಡುವೆ ಸೌಹಾರ್ದವಿರುವ ಹಾಗೆ ಅಧಿಕಾರವನ್ನು ಹಂಚಿಕೆ ಮಾಡುವುದಕ್ಕೆ ಸಿದ್ಧವಿದೆ.

ಅಸ್ಪೃಶ್ಯತೆ ಬಗ್ಗೆ ನಾನು ಮಾತನಾಡಬೇಕಾಗಿದೆ. ಕಳೆದ ಮೂವತ್ತು ವರ್ಷಗಳಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಲಾಗಲಿಲ್ಲ. ಹರಿಜನರು ದೇವಸ್ಥಾನಗಳಿಗೆ ಹೋಗುವ ಹಾಗಿಲ್ಲ, ಅವರು ಸಾರ್ವಜನಿಕ ಬಾವಿಗಳಲ್ಲಿ ನೀರು ತೆಗೆದುಕೊಳ್ಳುವ ಹಾಗಿಲ್ಲ ಹೀಗೆ

ಹಳ್ಳಿಗಳಲ್ಲಿ ಹರಿಜನರ ಮೇಲೆ ದಬ್ಬಾಳಿಕೆ ದಿನೇ ದಿನೇ ನಡೆಯುತ್ತಲೇ ಇದೆ. ಮೂವತ್ತು ವರ್ಷಗಳಿಂದ ಅಧಿಕಾರದಲ್ಲಿದ್ದ ಸರ್ಕಾರ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ ವಿಧಾಯಕ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ. ಇದು ದುಃಖದ ಸಂಗತಿ ಮತ್ತು ನಾಚಿಕೇ ಗೇಡಿನ ಪ್ರಸಂಗವೆಂದು ನನಗನ್ನಿಸುತ್ತದೆ. ಇಂದಿರಾಗಾಂಧಿಯವರು ಚುನಾವಣೆಯಲ್ಲಿ ಸೋತ ಮೇಲೆ, ಹರಿಜನರ ಉದ್ಧಾರ ಮಾಡುತ್ತೇವೆ, ಹರಿಜನರು ನಮ್ಮವರು ಎಂದು ಕಾಂಗ್ರೆಸ್‌ನವರು ಪ್ರಾರಂಭ ಮಾಡಿದ್ದಾರೆ. ನೆಹರೂಜಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಹರಿಜನರೊಬ್ಬರಿಗೂ ಭಾರತ ರತ್ನ ಕೊಡಲಿಲ್ಲ. ಈ ದೇಶದ ಹಣೆಬರಹವನ್ನು ಬರೆದ ಅಂತರರಾಷ್ಟ್ರೀಯ ಖ್ಯಾತಿವೆತ್ತ ವೈದ್ಯ ಅಂಬೇಡ್ಕರ್ ರವರಿಗೆ ಭಾರತ ರತ್ನ ಕೊಡುವ ವಿಚಾರ ಮಾಡಲಿಲ್ಲ. ಆದರೆ, ೧೯೭೦ನೇ ಇಸವಿಯಲ್ಲಿ ನಡೆದ ಬಾಂಗ್ಲಾ ಯುದ್ಧದಲ್ಲಿ, ಬಾಂಗ್ಲಾ ಜಯಗಳಿಸಿದ ನಂತರ, ಶ್ರೀಮತಿ ಇಂದಿರಾಗಾಂಧಿಯವರು ತಾವೇ ಭಾರತ ರತ್ನವನ್ನು ಸ್ವೀಕರಿಸಿದರು. ಆಗ ಈ ದೇಶದ ರಕ್ಷಣಾ ಮಂತ್ರಿಯಾಗಿದ್ದವರು ಯಾರು ? ರಕ್ಷಣಾ ಮಂತ್ರಿಯಾಗಿದ್ದ ಜಗಜೀವನರಾಂ ಅವರಿಗೆ ಭಾರತ ರತ್ನವನ್ನು ಕೊಡಬೇಕಾಗಿತ್ತು ; ಆದರೆ ಕೊಡಲಿಲ್ಲ. ಇದನ್ನು ನೋಡಿದ ಮೇಲೆ ನೆಹರೂಜಿಯಾಗಲೀ ಅಥವಾ ಅವರ ಪುತ್ರಿ ಇಂದಿರಾಗಾಂಧಿಯಾಗಲಿ ಚುನಾ ವಣೆ ಉದ್ದೇಶಕ್ಕೆ ಮಾತ್ರ ಹರಿಜನರನ್ನು ನಂಬಿಕೊಂಡಿದ್ದರೆನ್ನುವುದು ಸ್ಪಷ್ಟವಾಗುತ್ತದೆ. ಆಗ ಮರೆ ತ್ತಿದ್ದ ಹರಿಜನರನ್ನು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಿದ್ದ ಮೇಲೆ ಮತ್ತೆ ನೆನೆಪು ಮಾಡಿಕೊಳ್ಳಲಾಗುತ್ತದೆ. ಎಂಥಾ ವಿಪರ್ಯಾಸ.

೧೯೬೭ರಲ್ಲಿ ಈ ಸಭೆಗೆ ನಾನುರಿಪಬ್ಲಿಕನ್ ಪಕ್ಷದ ನಾಯಕನಾಗಿ ಆರಿಸಿ ಬಂದಾಗ, ಈ ಸಭೆಯಲ್ಲಿ ಡಾ : ಅಂಬೇಡ್ಕರ್ ಅವರ ಲೈಫ್‌ಸೈಜ್ ಭಾವಚಿತ್ರವನ್ನು ಹಾಕಬೇಕೆಂದು ಆಗಿನ ಅಧ್ಯಕ್ಷರಾದ ವೈಕುಂಠ ಬಾಳಿಗಾ ಅವರಲ್ಲಿ ಕೇಳಿಕೊಂಡಿದ್ದೆ. ಆದರೆ, ಅದು ಆಗಲಿಲ್ಲ. ಇವತ್ತು ಮಾನ್ಯ ದೇವರಾಜ ಅರಸ್ ಅವರು ನೇಮಕಾತಿಗಳಲ್ಲಿ ಮತ್ತು ಬಡ್ತಿಗಳಲ್ಲಿ ಹರಿಜನರಿಗೆ ಪ್ರತಿಶತ ಹದಿನೆಂಟರಷ್ಟು ಪ್ರಾತಿನಿಧ್ಯ ಕೊಡಬೇಕೆಂದು ಮಾಡಿದ್ದಾರೆ. ಇದು ಅಭಿನಂದನೀಯ. ಆದಕ್ಕಾಗಿ ನಾನು ಮಾನ್ಯ ದೇವರಾಜ ಅರಸ್ ಅವರನ್ನು ನಾನು ಅಭಿವಂದಿಸುತ್ತೇನೆ. ಈ ಸಭೆಯಲ್ಲಿ ಮಹಾತ್ಮ ಗಾಂಧೀಜಿಯವರು, ನೆಹರೂಜಿಯ ವರ, ರಾಧಾಕೃಷ್ಣನ್, ರಾಜೇಂದ್ರಪ್ರಸಾದ್ ಮತ್ತು ವಲ್ಲಭಬಾಯ್ ಪಟೇಲ್ ಅವರ ಭಾವಚಿತ್ರ ಗಳಿವೆ. ಇವರ ಜೊತೆಯಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವ ಚಿತ್ರವನ್ನು ಇಲ್ಲಿ ಅನಾವರಣ ಮಾಡಬೇಕು. ಈತನು ಭಾರತದ ಸಂವಿಧಾನದ ಪಿತ ; ಭಾರತದ ಸಂವಿಧಾನದ ಮುಖ್ಯ ಶಿಲ್ಪಿ. ಇಂದು ಇವರ ಭಾವಚಿತ್ರ ಈ ಸದನದಲ್ಲಿಲ್ಲ. ನಾನು ಜನತಾ ಪಕ್ಷದ ಹರಿಜನ ನಾಯಕನಾಗಿ ಅಧ್ಯಕ್ಷರು ಮತ್ತು ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಏಪ್ರಿಲ್ ಹದಿನಾಲ್ಕರಂದು ಅಂಬೇಡ್ಕರ್‌ರವರ ಜನ್ಮದಿನವಿದೆ ; ಅಂದು ಅವರ ಭಾವಚಿತ್ರವನ್ನು ಈ ಸದನದಲ್ಲಿ ಅನಾವರಣ ಮಾಡಬೇಕು.

ಅಸ್ಪೃಶ್ಯತೆ ನಿವಾರಣೆ ಬಗ್ಗೆ ಮಾತನಾಡುವ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಕುಟುಂಬ ಯೋಜನೆಗಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ; ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅನೇಕ ವ್ಯಾನುಗಳನ್ನು ಒದಗಿಸಲಾಗಿದೆ, ವೈದ್ಯರು ಹಳ್ಳಿ ಯಿಂದ ದಿಲ್ಲಿಯತನಕ ಓಡಾಡುತ್ತಿದ್ದಾರೆ. ಆದರೆ why not for the abolition of untouch ability in this country ; why any project was not taken up to solve this problem on war footing ? ಕುಟುಂಬ ಯೋಜನೆಗೆ ಹೇಗೆ ಕೋಟ್ಯಾಂತರ ರೂಪಾಯಿ ಗಳನ್ನು ಖರ್ಚು ಮಾಡುವಿರೋ ಹಾಗೆಯೇ ಅಸ್ಪೃಶ್ಯತಾ ನಿವಾರಣೆ ಬಗ್ಗೆಯೂ ಖರ್ಚು ಮಾಡಿ, ಈ ಸಾಮಾಜಿಕ ಪಿಡುಗನ್ನು ತೊಲಗಿಸಿ. ನಾವು ಇಂದು ಇದನ್ನು ಮಾನವೀಯ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರಕ್ಕೆ ಹರಿಜನರು ಇಂದು ಬೇಡವಾಗಿದ್ದಾರೆ ; ಚುನಾವಣೆಗಳು ಹತ್ತಿರ ಬಂದಾಗ ಅವರು ವಚನಗಳನ್ನು ಹರಿಜನರಿಗೆ ನೀಡುತ್ತಾರೆ. ಹೀಗೆ ಮಾಡುತ್ತಾ ಹೋದರೆ ಹರಿಜನರ ಉದ್ಧಾರ ಎಂದಿಗೂ ಸಾಧ್ಯವಾಗುವುದಿಲ್ಲ ; ಮತ್ತು ಹರಿಜನರು ಬಂಡಾಯ ಏಳಬೇಕಾದ ಪರಿಸ್ಥಿತಿ ಬಂದುಬಿಡುತ್ತದೆ. ಗಾಂಧೀಜಿಯವರು ಹೇಳಿದಂತೆ ಅಸ್ಪೃಶ್ಯತೆ ನಿರ್ಮೂಲ ನೆಗಾಗಿ ವಿಧಾಯಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ; ಆಗ ಹರಿಜನರ ಉದ್ಧಾರವಾಗುತ್ತದೆ. ಆದರೆ, ಅವರನ್ನು ಉದ್ಧಾರ ಮಾಡುವ ಇಷ್ಟ ಇವರಿಗಿಲ್ಲ. It may be your interest to our masters, but how can you expect us to be your slaves? They have become the symbol of caste breeding. ಆ ರೀತಿ ಆಗುವುದಾದರೆ ನಾವು

ಭಾರತದಲ್ಲಿ ಜಾತ್ಯಾತೀತ ಸಮಾಜವನ್ನು ಕಟ್ಟುವುದಕ್ಕಾಗುವುದಿಲ್ಲ. ಸರ್ಕಾರ ಮತ್ತು ಸಂಸ್ಥೆಗಳು ಹಾಗೂ ಸಾರ್ವಜನಿಕರೆಲ್ಲರೂ ಒಟ್ಟಿಗೆ ಸೇರಿ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ, ಆದರ್ಶ ಭಾರತವನ್ನು ಕಟ್ಟಲಿಕ್ಕೆ ಸಾಧ್ಯವಾಗುತ್ತದೆ. ಅದು ಬಿಟ್ಟು, ಹರಿಜನರು ಇನ್ನೂ ನಮ್ಮ ಕಾಲ ಮೇಲೆ ಬೀಳಬೇಕೆಂದು ಬಯಸುವುದು ತಪ್ಪು. ಹರಿಜನರ ಉದ್ಧಾರ ಮಾನವೀಯ ದೃಷ್ಟಿಯಿಂದಾಗಬೇಕು ; ಬರೀ ಕಣ್ಣೀರು ಒರೆಸುವ ಯೋಜನೆಗಳಾಗಬಾರದು.

೫–೦೦ ಪಿ. ಎಂ.

ಆದುದರಿಂದ ಈ ಎಲ್ಲಾ ವಿಚಾರಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಈ ಜಾತೀತಿಯತೆ ಯನ್ನು ಹೋಗಲಾಡಿಸಲು, ಈ ದೀನದಲಿತರಿಗೆ ಜಮೀನುಗಳನ್ನು ಕೊಟ್ಟು, ಅವರ ಮಕ್ಕಳಿಗೆ ನೌಕರಿಗಳನ್ನು ಕೊಟ್ಟು ಮಾಡುವುದಾದರೆ ಅವರ ಆರ್ಥಿಕ ಏಳಿಗೆಯಾಗಿ ಈ ಜಾತಿಯತೆ ಅಳಿಯಲು ಸಹಾಯವಾಗುತ್ತದೆ ಎಂದು ಹೇಳುತ್ತೇನೆ. ಸರ್ಕಾರ ಈ ರೀತಿಯಾದ ಯೋಜನೆಗಳನ್ನು ಹಾಕಿಕೊಳ್ಳ ಬೇಕೆಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ.

ಇನ್ನು ಬೌಂಡೆಡ್ ಲೇಬರ್ ಮೇಲೆ ಮತ್ತು ಇನ್ನೂ ಅನೇಕ ವಿಷಯಗಳ ಮೇಲೆ ಮಾತನಾಡು ವುದು ಇತ್ತು. ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಈಗ ಸಭೆಯ ಮುಂದೆ ಏನು ಹೇಳಿದನೋ ಅದನ್ನಾದರೂ ಕೂಡ ಸರ್ಕಾರದವರು ಪರಿಶೀಲಿಸಿ ಕೂಡಲೇ ಜಾರಿಗೆ ತರುವಂತೆ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತನ್ನ ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಟ್ಟಲ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಕನ್ನಡ ದಲ್ಲಿ ಯಾವ ಭಾಗವನ್ನು ಹೇಳಿದ್ದಾರೆ ಅದರ ಬಗ್ಗೆ ನಾನು ಖಂಡಿತವಾಗಿ ಅವರಿಗೆ ಕೃತಜ್ಞತೆಗಳನ್ನು ಅರ್ಪಿ ಸುವುದಲ್ಲದೆ ಅವರಿಗೆ ನನ್ನ ಬೆಂಬಲವನ್ನೂ ಕೂಡ ಸೂಚಿಸುತ್ತೇನೆ. ಏತಕ್ಕೆಂದರೆ ಅದರಲ್ಲಿ ಅವರು ವೈಯಕ್ತಿಕವಾಗಿ ನಮಗೆಲ್ಲರಿಗೂ ಜೀವನ ಸುಖಮಯವಾಗಿರಲೆಂದು ಹಾರೈಸಿದ್ದಾರೆ. ಹಾಗೆಯೇ ಅವರಿಗೂ ಕೂಡ ವೈಯಕ್ತಿಕವಾಗಿ ಹೇಳುವುದಾದರೆ ಅವರಿಗೆ ಶ್ರೇಯಸ್ಸು ಮತ್ತು ಅವರ ಜೀವನ ಸುಖ ಮಯವಾಗಿರಲೆಂದು ಹೇಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದರೆ ರಾಜ್ಯಪಾಲರು ಈ ಸರ್ಕಾರದ ಧ್ಯೇಯಧೋರಣೆಗಳ ಬಗ್ಗೆ ಇದುವರೆಗೆ ಏನು ಅನುಸರಿಸಿದೆ ಮತ್ತು ಮುಂದೆ ಯಾವ ಧ್ಯೇಯಧೋರಣೆ ಗಳನ್ನು ಅನುಸರಿಸಬೇಕು ಅನ್ನುವುದರ ಬಗ್ಗೆ ಅವರು ಏನು ಮಾತುಗಳನ್ನು ಹೇಳಿದ್ದಾದರೆ ಅದಕ್ಕೆ ಅವರಿಗೆ ಅಭಿನಂದನೆ ಕೊಡಬೇಕೆಂದು ನನಗೆ ಅನಿಸುವುದಿಲ್ಲ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ ಅವರು ಸರ್ಕಾರದ ಮಾತುಗಳನ್ನು ಏನು ಹೇಳಿದ್ದಾರೆ ಅದರಲ್ಲಿ ಭಿನ್ನಾಭಿಪ್ರಾಯಗಳು ಇವೆ, ಎರಡನೆಯದಾಗಿ ಅವೆಲ್ಲಕ್ಕೂ ಕೂಡ ಅವರ ಬೆಂಬಲ ಏನು ಇದೆ ಮತ್ತು ಆ ಬಗ್ಗೆ ಸರ್ಕಾರದ ಧೋರಣೆಗಳು ಏನು ಇದೆ ಅದರಲ್ಲೂ ಕೂಡ ನನಗೆ ಸಂಶಯ ಇದೆ. ಆದುದರಿಂದ ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ಏನು ಹೇಳಿದ್ದಾರೆ ಅದಕ್ಕೆ ವಂದನೆಗಳನ್ನು ಸಲ್ಲಿಸತಕ್ಕದ್ದಲ್ಲ ಅನ್ನುವುದೇ ನನ್ನ ಅಭಿಪ್ರಾಯ ರಾಜ್ಯಪಾಲ ರಿಗೆ ನಾನು ವೈಯಕ್ತಿಕವಾಗಿ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—On a Point of Order. ಈವೊತ್ತು ಪ್ರೆಸಿಡೆಂಟ್ ಆಗಲಿ ಅಥವಾ ಗೌರ್ನರ್ ಆಗಲಿ ಕಾನ್ಸ್ಟಿಟ್ಯೂಷನ್ ಪ್ರಕಾರ ಕ್ಯಾಬಿನೆಟ್ ಧೋರಣೆಗಳನ್ನು ಮಾತ್ರ ಹೇಳುತ್ತಾರೇ ವಿನಾ ವೈಯಕ್ತಿಕವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ After the 42nd amendment whatever cabinet decides, the policies and the decisions of the government are reflected in the speech of the Governor. The views of the Government are expressed through the Governor, Therefore the credit goes to the Government and not to the Governor. ಆದುದರಿಂದ ಗೌರ್ನರ್ ಬಗ್ಗೆ ವೈಯಕ್ತಿಕವಾಗಿ ಮಾಡನಾಡುವುದಕ್ಕೆ ಅವಕಾಶವೇ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ಹೇಳಿದ್ದು ಏನೆಂದರೆ ರಾಜ್ಯಪಾಲರು ಸರ್ಕಾರದ ಧ್ಯೇಯ ಧೋರಣೆಗಳ ಬಗ್ಗೆ ಈ ರೀತಿ ಹೇಳಿದ್ದಾರೆ ಎಂದು ಅದರಲ್ಲಿ ಒಂದು ಮುಖ್ಯವಾದ ಅಂಶ ಏನೆಂದರೆ ಅವರ ಭಾಷಣವನ್ನು ಮೊದಲಿನಿಂದ ಕೊನೆಯವರೆಗೂ ಓದಿದಾಗ ನಮ್ಮ ರಾಜ್ಯದ ಜೀವನಾಡಿಯಾಗಿರತಕ್ಕ ಅಂಥಾ ಒಂದು ವರ್ಗದ ಬಗ್ಗೆ ಭಾಷಣದಲ್ಲಿ ಒಂದು ಮಾತೂ ಇದ್ದಂತೆ ಕಾಣುವುದಿಲ್ಲ. ಆ ಒಂದು ವರ್ಗವನ್ನು ಸರ್ಕಾರ ಸಂಪೂರ್ಣವಾಗಿ ಕಡೆಗಣಿಸುತ್ತಾ ಇದೆ ಎನ್ನುವುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಅದು ಯಾವ ವರ್ಗ ಎಂದರೆ ನಮ್ಮ ರಾಜ್ಯದ ಕಾರ್ಮಿಕ ವರ್ಗ. ನಮ್ಮ ರಾಜ್ಯದಲ್ಲಿರತಕ್ಕಂಥಾ ಕಾರ್ಮಿಕ ವರ್ಗದವರು ಜೀತದಾಳುಗಳಲ್ಲ. ಸುಸಂಘಟಿತವಾದಂಥಾ ಈ ಒಂದು ವರ್ಗ ಅದು ಸಾರಿಗೆ ಇಲಾಖೆಯಲ್ಲೇ ಇರಲಿ, ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇರಲಿ ಗೃಹನಿರ್ಮಾಣ ಇಲಾಖೆಯಲ್ಲೇ ಇರಲಿ ಅವರೆಲ್ಲರೂ ಕೂಡ ಎಲ್ಲಕಿಂತ ಮುಖ್ಯವಾದವರು ಅವರು ಇದನ್ನು ಕಾರ್ಯರೂಪಕ್ಕೆ ತರತಕ್ಕಂಥಾವರು, ಇದರಲ್ಲಿ ಉತ್ಪಾದನೆ ಮಾಡತಕ್ಕಂಥಾವರು. ಈ ಮಾತನ್ನು ಹೇಳಿದರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅಂಥಾದ್ದರಲ್ಲಿ ಈ ಕಾರ್ಮಿಕ ವರ್ಗದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತೂ ಹೇಳಿಲ್ಲಾ ಎಂದರೆ ಸರ್ಕಾರಕ್ಕೆ ಇವರ ಬಗ್ಗೆ ಯೋಚನೆ ಬರಲಿಲ್ಲಾ ಎಂದು ನನಗೆ ಅನಿಸುತ್ತದೆ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ, ಮೊದಲನೆಯದಾಗಿ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಕಾರ್ಮಿಕ ವರ್ಗ ಏನು ಇದ್ದಾರೆ ಅವರು ಆಗಿ ಗ್ಯಾಂಗ್‌ಮನ್ ವರ್ಕರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಹರಿಜನರು, ಗಿರಿಜನರು ಹಿಂದುಳಿದ ವರ್ಗಕ್ಕೆ ಸೇರಿದವರು, ಪಿ. ಡಬ್ಲ್ಯು. ಡಿ ಯಲ್ಲಿ ಗ್ಯಾಂಗ್‌ಮನ್ ಆಗಿ ಇದ್ದಾರೆ. ಅವರು ರೋಡ್ ಕನ್‌ಸ್ಟ್ರಕ್ಷನ್ ಇಂಥಾ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರುಗಳಿಗೆ ಇಷ್ಟು ವೇತನ ಕೊಡಬೇಕು ಎಂದು ಸರ್ಕಾರ ಏನು ನಿಗದಿ ಮಾಡಿದ್ದಾರೋ ಅದನ್ನು ಕೊಡುತ್ತಾ ಇಲ್ಲ. ಈ ಬಗ್ಗೆ ನಾನು ಮಂಗಳೂರಿನಲ್ಲಿ ವಿಚಾರಿಸಿದಾಗ ಅಲ್ಲಿಯ ಸೂಪರಿಂಟೆಂಡೆಂಟ್ ಇಂಜನೀಯರ್‌ರವರು ಹೇಳಿದರು ಈ ಬಗ್ಗೆ ಏಪ್ರಿಲ್‌ನಲ್ಲಿ ಕೊಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ ಎಂದು. ಅವರಿಗೆ ಕಾನೂನು ಮೂಲಕ ಕನಿಷ್ಟ ವೇತನ ಇಷ್ಟು ಕೊಡಬೇಕು ಅಂತ ಏನು ಇದೆಯೋ ಅದನ್ನೂ ಕೂಡ ಕೊಡುವುದಕ್ಕೆ ಸರ್ಕಾರಕ್ಕೆ ಆಗದೇ ಹೋದರೆ ಸರ್ಕಾರದ ಬೊಕ್ಕಸದಲ್ಲಿ ಇದಕ್ಕೆ ಹಣ ಇಲ್ಲ ಎಂದರೆ ಅವರು ಇನ್ನು ಇದರಲ್ಲಿ ಏನು ಉಳಿಸುತ್ತಾರೋ ಗೊತ್ತಿಲ್ಲ ಆ ಕಾರ್ಮಿಕರಿಗೆ ಕನಿಷ್ಟ ವೇತನವನ್ನೂ ಸಹ ಕೊಡುವುದಕ್ಕೆ ಕಷ್ಟ ಎಂದರೆ ಇವರು ಇನ್ನು ಏನು ಉಳಿಸುತ್ತಾರೋ ಗೊತ್ತಿಲ್ಲ ಈ ಕಾಂಟ್ರಾಕ್ಟ್ ಲೇಬರ್ ಆಕ್ಟ್ ಬಗ್ಗೆ ಒಂದು ಶಾಸನ ಮಾಡಿ ಪಾರ್ಲಿಮೆಂಟ್‌ನಲ್ಲಿ ಇದು ಮಂಜೂರು ಆಗಿದೆ. ಆದರೆ ಇಲ್ಲಿ ಆ ಬಗ್ಗೆ ರೂಲ್ಸ್ ತಯಾರು ಮಾಡಿ ಅದನ್ನು ಜಾರಿಗೊಳಿಸಬೇಕಾದರೆ ಅದಕ್ಕೆ ಒಂದು ಬೋರ್ಡ್ ನೇಮಕ ಮಾಡಬೇಕಾಗಿರುತ್ತೆ ಆ ಬಗ್ಗೆ ಈ ಸದನದಲ್ಲಿ ಎಷ್ಟೋ ಸಾರಿ ಪ್ರಸ್ತಾಪ ಮಾಡಿದ್ದೇನೆ.

SRI B. B. SAYANAK.—I rise a point of order. Last time my hon, friend Sri Armugam has requested to the Government through Speaker that when discussion is going on the Governor's address, the Heads of Department must be present in the House. I have observed that not a single Head of the Department is present in the House, Speaker had also suggested that he would request the Minister to instruct the officers to be present in the House.

SRI K. H. RANGANATH.—Instructions have been issued to the Heads of Departments through the Chief Secretary to attend the House. In between morning and evening they will have to attend to their work. If the Heads of the Departments are not in a position to attend some responsible officers would be asked to attend the Assembly. Since the discussion commenced later in the day, some of them may not be knowing it.

ಶ್ರೀ ಬಿ. ವಿ. ಕಕ್ಕಿಲಾಯ.—ಕಾಂಟ್ರಾಕ್ಟ್ ಲೇಬರ್ ಆಕ್ಟ್ ಬಗ್ಗೆ ಅದನ್ನು ಜಾರಿಗೊಳಿಸುವುದಕ್ಕೋಸ್ಕರವಾಗಿ ಒಂದು ಬೋರ್ಡ್ ನೇಮಕ ಮಾಡಬೇಕು ಎಂದು ನಾನು ಕಳೆದ ಅಧಿವೇಶನದಲ್ಲೆ ಪ್ರಸ್ತಾಪ ಮಾಡಿದಾಗ ಆಗ ಲೇಬರ್ ಮಂತ್ರಿಗಳಾದ ಶ್ರೀಮಾನ್ ಸಿ. ಎನ್. ಪಾಟೀಲರು ಇನ್ನು ಒಂದುವಾರದೊಳಗೆ ಆ ಬೋರ್ಡನ್ನು ನೇಮಕ ಮಾಡುತ್ತೇವೆ ಎಂದು ಹೇಳಿದರು. ಆದರೆ ಆ ಕೆಲಸ ಇದುವರೆಗೂ ಆಗಲಿಲ್ಲಾ. ಇದರ ಪರಿಣಾಮ ಏನಾಗುತ್ತದೆ ಎಂದರೆ ಪಿ. ಡಬ್ಲ್ಯು. ಡಿ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥಾ ಕಾಂಟ್ರಾಕ್ಟ್ ಲೇಬರ್ ಏನು ಇದ್ದಾರೆ ಅವರು ಜೀತ ಪದ್ಧತಿಗಿಂತಲೂ ಒಂದು ಕನಿಷ್ಟ ಮಟ್ಟದಲ್ಲಿ ಕೆಲಸ ಮಾಡಬೇಕಾಗಿದೆ. ಕಾಂಟ್ರಾಕ್ಟರ್ ಕೈಕೆಳಗೆ ಅವರು ಕೆಲಸ ಮಾಡಬೇಕಾಗಿದೆ,

ಅವರನ್ನು ಆ ಕಾಂಟ್ರಾಕ್ಟರ್ ಚೆನ್ನಾಗಿ ದುಡಿಸುತ್ತಿದ್ದಾರೆ. ಅವರ ಬಗ್ಗೆ ಈ ಸರ್ಕಾರ ಇದುವರೆಗೆ ಏತಕ್ಕೆ ಗಮನ ಕೊಟ್ಟಿಲ್ಲವೋ ಗೊತ್ತಿಲ್ಲ. ಈ ಬಗ್ಗೆ ಸರ್ಕಾರದವರು ಏತಕ್ಕೆ ಒಂದು ಬೋರ್ಡ್ ಅನ್ನು ಇದುವರೆಗೆ ರಚಿಸಿಲ್ಲ ಅನ್ನುವುದನ್ನು ಸರ್ಕಾರ ಉತ್ತರ ಕೊಡುವಾಗ ಹೇಳಬೇಕು.

ಇನ್ನು ಎರಡನೆಯದಾಗಿ ಹೇಳುವುದು ಏನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಯ್ನಾ ಕ್ಯಾಟಲ್ ಬ್ರೀಡ್ ಫಾರಂ ಅಂತ ಇದೆ. ಅಲ್ಲಿ ಕೆಲಸಗಾರರು ಇದ್ದಾರೆ. ಅವರಿಗೆ ಯಾವುದೇ ಒಂದು ನಿಯಮ ಇಲ್ಲ, ಅವರು ಯಾವ ನಿಯಮಗಳನ್ನೂ ಕೂಡ ಪಾಲಿಸುವುದೂ ಇಲ್ಲ. ಇದರ ಬಗ್ಗೆ ಅಲ್ಲಿಯ ಕೆಲಸಗಾರರ ಸಂಘದವರು ಕೋರ್ಟಿನ ಮುಂದೆ ಹೋಗಿ ಇಂಡಸ್ಟ್ರಿಯಲ್ ಡಿಸ್‌ಪ್ಯೂಟನ್ನು ರೈಜ್ ಮಾಡಿದಾಗ ಕೋರ್ಟಿನವರು ಅವರ ಪರವಾಗಿ ತೀರ್ಪು ಕೊಟ್ಟಿದ್ದಾರೆ. ಅವರ ಸಂಬಳ ಸಾರಿಗೆ ಮತ್ತು ಇತರೇ ಸವಲತ್ತುಗಳನ್ನು ಹಿಂದಿನಿಂದ ಕೊಡಬೇಕೆಂದು ತೀರ್ಮಾನ ಕೊಟ್ಟಿದ್ದಾರೆ. ಇದರಿಂದ ಎರಡೂವರೆ ಲಕ್ಷ ರೂ.ಗಳಷ್ಟು ಬಾಕಿಯನ್ನು ಕೊಡಬೇಕಾಗುತ್ತದೆ. ಈ ತೀರ್ಮಾನ ಬಂದು ೨ ವರ್ಷಗಳಾದರೂ ಸಹ ಅದನ್ನು ಸರ್ಕಾರದವರು ಕಾರ್ಯರೂಪಕ್ಕೆ ತಂದಿಲ್ಲ. ಸರ್ಕಾರದ ಇಲಾಖೆಯವರೇ ಇದನ್ನು ಕಾರ್ಯರೂಪಕ್ಕೆ ತಂದಿಲ್ಲವೆಂದರೆ, ಇನ್ನು ಕೋರ್ಟಿನವರ ಆದೇಶವನ್ನು ಜಾರಿಗೆ ತರದ ಖಾಸಗಿಯವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ. ಇಂತಹ ಹಲವಾರು ತೀರ್ಮಾನಗಳಿವೆ. ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ಈ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವಂತೆ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಂಗಳೂರಿನ ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಬಗ್ಗೆ ಹೇಳಬೇಕೆಂದರೆ. ಮುನಿಸಿಪಾಲಿಟಿಯು ಬಡ್ಜೆಟಿನಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ ಮತ್ತು ಗಿರಿಜನ ನೌಕರರಿಗೆ ಎಲ್ಲ ರೀತಿ ಸವಲತ್ತುಗಳನ್ನು ಕೊಡುವುದಕ್ಕಾಗಿ ಮೀಸಲಿಡಬೇಕೆಂದು ತಾವು ಆಜ್ಞೆ ಹೊರಡಿಸಿದ್ದೀರಿ. ಈ ಆಜ್ಞೆಯ ಪ್ರಕಾರ ಎಷ್ಟು ಮುನಿಸಿಪಾಲಿಟಿಗಳು ಮತ್ತು ತಾಲ್ಲೂಕ್ ಬೋರ್ಡಿನವರು ನಡೆದುಕೊಂಡಿವೆ ಮತ್ತು ಆ ಹಣವನ್ನು ಸರಿಯಾಗಿ ಖರ್ಚು ಮಾಡಿವೆಯೋ ಅಥವಾ ಇಲ್ಲವೇ ಎಂಬುದನ್ನು ಏನಾದರೂ ತಾವು ತನಿಖೆ ಮಾಡಿದ್ದೀರಾ ? ನಮ್ಮ ಮಂಗಳೂರು ಮುನಿಸಿಪಾಲಿಟಿಯ ಬಗ್ಗೆ ಹೇಳಬೇಕೆಂದರೆ, ಈ ರೀತಿ ೧೮ ಪರ್ಸೆಂಟ್ ಹಣವನ್ನು ಏನು ಮೀಸಲಿಟ್ಟಿದ್ದಾರೆ, ಆ ಹಣವನ್ನು ಖರ್ಚು ಮಾಡದೇ ಹಾಗೆಯೇ ಉಳಿಸಿದ್ದಾರೆ, ಈ ಹಣವನ್ನು ಹಾಸ್ಟಲ್‌ಗಳಿಗೆ ಗ್ಯಾಸ್‌ಸಿಲಂಡರ್ ಒದಗಿಸುವುದಕ್ಕೆ ಮತ್ತು ಇತರೇ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಖರ್ಚು ಮಾಡಬೇಕೆಂದು ಒಂದು ಠರಾವು ಮಾಡಿದರು. ಇದನ್ನು ಸರ್ಕಾರದ ಗಮನಕ್ಕೆ ತಂದಾಗ, ಡಿವಿಜನಲ್ ಕಮೀಷನರ್ ಅವರು ಆ ಠರಾವನ್ನು ರದ್ದು ಮಾಡಿದರು. ನೂರಕ್ಕೆ ನೂರರಷ್ಟು ಈ ಪೌರ ಕಾರ್ಮಿಕರು ಹರಿಜನರೇ ಆಗಿದ್ದರೂ ಸಹ, ಇವರ ಅಭಿವೃದ್ಧಿಗಾಗಿ ಈ ಹಣವನ್ನು ಖರ್ಚು ಮಾಡಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರದ ಜಾಗದಲ್ಲಿ ಇಲ್ಲವೇ ಖಾಸಗೀ ಜಾಗವನ್ನು ಖರೀದಿ ಮಾಡಿ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಿ ಎಂದು ಕಾರ್ಮಿಕರು ಎಷ್ಟು ಸಲ ಕೇಳಿಕೊಂಡರೂ ಸಹ ಅಲ್ಲಿಯ ಮುನಿಸಿಪಾಲಿಟಿಯವರು ಗಮನ ಕೊಡುತ್ತಿಲ್ಲ. ಇಂತಹ ಕೆಲಸವನ್ನು ಸರ್ಕಾರದವರೇ ಅವರ ಮೇಲೆ ಒತ್ತಡ ತಂದು ಮಾಡಿಸಬೇಕು. ಆಗ ತಾವು ಇದರಲ್ಲಿ ಹೇಳಿರುವುದು ಪ್ರಾಮಾಣಿಕವಾದಂಥ ಮಾತು ಎಂದು ನಮಗೆ ನಂಬಿಕೆ ಬರುತ್ತದೆ.

ಇನ್ನು ಕಾರ್ಮಿಕರಿಗೆ ಸಹಾಯ ಮಾಡುವುದಕ್ಕೋಸ್ಕರ ರಿಲೀಫ್ ಅಂಡರ್‌ಟೇಕಿಂಗ್ ಆಕ್ಟ್ ಎಂದು ಒಂದು ಮಸೂದೆಯನ್ನು ಈ ಸಭೆಯಲ್ಲಿ ಮಂಜೂರು ಮಾಡಲಾಯಿತು. ಅದಕ್ಕೆ ಬಹಳ ಕಾಲದಿಂದ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಡಲಿಲ್ಲ. ಈಗ ಒಪ್ಪಿಗೆ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅಲ್ಲಿಂದ ಅನುಮತಿ ಬಂದಮೇಲೂ ಸಹ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ಕೆಲಸ ಒದಗಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ ಮಿಲ್ಸ್, ಹುಬ್ಬಳ್ಳಿಯ ಮಹದೇಶ್ವರ ಟೆಕ್ಸ್‌ಟೈಲ್ಸ್ ಮಿಲ್‌ನ್ನು ಮುಚ್ಚಿರುವ ಕಾರಣ ಅಲ್ಲಿನ ಕೆಲಸಗಾರರಿಗೆ ಉದ್ಯೋಗ ಇಲ್ಲವಾಗಿದೆ ಎಂಬುದಾಗಿ ಮಾನ್ಯ ಪಂಪಾಪತಿಯವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಪಂಪಾಪತಿಯವರು ಮೊನ್ನೆ ತಾನೆ ಇದನ್ನು ಪ್ರಸ್ತಾಪ ಮಾಡಿದಾಗ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಅದರಂತೆ ಸರ್ಕಾರ ತೀವ್ರಗತಿಯಿಂದ ಮಾಡಬಹುದು,

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಆಶ್ವಾಸನೆ ಕೊಡುತ್ತಲೇ ಬಂದಿದ್ದಾರೆ ಆದರೆ ಏನು ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರಿಂದ ಅಲ್ಲಿನ ಕಾರ್ಮಿಕರಿಗೆ ಉದ್ಯೋಗ ಸಿಕ್ಕಿಲ್ಲ. ಮಾನ್ಯ ಪಂಪಾಪವತಿಯವರೇ ಅಲ್ಲಿಯ ಮುನಿಸಿಪಾಲಿಟಿ ಅಧ್ಯಕ್ಷರಾಗಿದ್ದಾರೆ. ೨-೩ ಲಕ್ಷದಷ್ಟು ಹಣವನ್ನು ಮುನಿಸಿಪಾಲಿಟಿಯಿಂದ ಮತ್ತು ಸಾರ್ವಜನಿಕರಿಂದ ಸಂಗ್ರಹ ಮಾಡಿ ಸರ್ಕಾರಕ್ಕೆ ತುಂಬುತ್ತೇವೆ ಸರ್ಕಾರದವರು ತಮ್ಮ ಪಾಲಿನ ಹಣವನ್ನು ಹಾಕಿ ಈ ಗಿರಣಿಗಳನ್ನು ನಡೆಸಿ ಎಂದು ಅವರು ಹೇಳಿದರೂ ಸಹ ಸರ್ಕಾರದವರು ಅದರ ಕಡೆ ಇನ್ನೂ ಗಮನ ಕೊಡುತ್ತಿಲ್ಲ. ಇನ್ನು ಮುಂದಾದರೂ ಸರ್ಕಾರದವರು ಈ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸದಿದ್ದರೆ, ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರಬಹುದೆಂದು ಹೇಳುತ್ತೇನೆ. ಅಂತಹ ಪರಿಸ್ಥಿತಿಗೆ ಅವಕಾಶ ಕೊಡದೆ, ಈ ಕೂಡಲೆ, ಆ ಸರ್ಕಾರದವರು ತೀವ್ರವಾಗಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ತಮ್ಮ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹಲವಾರು ಹೊಸ ಆಸ್ಪತ್ರೆಗಳನ್ನು ಆರಂಭ ಮಾಡಲಾಗಿದೆ ಎಂದು ಹೇಳಿದ್ದಾರೆ. ಪ್ರತಿ ೯೦೦ ಜನಕ್ಕೆ ಒಂದರಂತೆ ಹಾಸಿಗೆ ಸೌಲಭ್ಯವಿದೆ, ೭೫೦೦ ಜನಕ್ಕೆ ಒಬ್ಬರಂತೆ ವೈದ್ಯರ ಸೇವೆಯ ಸೌಲಭ್ಯವಿದೆ ಎಂದು ಹೇಳಿದ್ದಾರೆ. ಆದರೆ ಈ ಎಲ್ಲ ಸೌಲಭ್ಯಗಳೂ ಸಹ ಹೆಚ್ಚಾಗಿ ನಗರ ಮತ್ತು ಸಿಟಿಗಳಲ್ಲಿಯೇ ಇದೆ. ಒಟ್ಟು ರಾಜ್ಯದ ಜನಸಂಖ್ಯೆಯನ್ನು ಲೆಕ್ಕ ಹಾಕಿ ಈ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಇದರ ಸಿಂಹ ಭಾಗದ ಸೌಲಭ್ಯ ನಗರ ಮತ್ತು ಸಿಟಿಗಳಲ್ಲಿರತಕ್ಕಂಥ ಜನರಿಗೆ ಸಿಗುತ್ತಿದೆಯೇ ಹೊರತು ಹಳ್ಳಿಗಳಲ್ಲಿರತಕ್ಕಂಥ ಜನರಿಗೆ ಖಂಡಿತವಾಗಿಯೂ ಸಿಗುತ್ತಿಲ್ಲ, ಇದಕ್ಕೆ ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನೇ ಕೊಡುತ್ತೇನೆ. ಬಂಟ್ವಾಳದಲ್ಲಿ ೧೦೨ ವರ್ಷಗಳಷ್ಟು ಹಳೆಯದಾದ ಒಂದು ಆಸ್ಪತ್ರೆ ಕಟ್ಟಡವಿದೆ. ಅದು ಯಾವಾಗ ಕುಸಿದು ಬೀಳುತ್ತದೋ ಗೊತ್ತಿಲ್ಲ. ಅಲ್ಲಿ ಮಂಚಗಳಿಲ್ಲ. ಹಾಸಿಗೆಗಳು ಚೆನ್ನಾಗಿಲ್ಲ. ಹಾಸಿಗೆಯೊಳಗೆ ಹೆಗ್ಗಣಗಳು ಹೋಗಿ ಕೂತುಕೊಂಡರೂ ಸಹ ರೋಗಿಗಳಿಗೆ ಗೊತ್ತಾಗುವುದಿಲ್ಲ. ಆ ರೀತಿ ಇವೆ. ಒಂದು ಲಕ್ಷ ರೂ. ಗಳನ್ನು ಸಂಗ್ರಹ ಮಾಡಿಕೊಡುತ್ತೇವೆ, ಅಲ್ಲಿ ಒಂದು ನೂರು ಬೆಡ್‌ಗಳು ಇರುವಂತಹ ಹೊಸ ಕಟ್ಟಡ ಕಟ್ಟಿಸಿಕೊಡಿ ಎಂದು ಕಳೆದ ಮೂರು ಅಧಿವೇಶನದಿಂದಲೂ ನಾನು ಸಾರ್ವಜನಿಕರ ಪರವಾಗಿ ಹೇಳುತ್ತಲೇ ಬಂದಿದ್ದೇನೆ. ಆದರೆ ಇಷ್ಟರವರೆಗೆ ಯಾರೂ ಗಮನ ಕೊಟ್ಟಿಲ್ಲ. ಅಂದರೆ ಹೇಳುವವರು ಕೇಳುವವರು ಯಾರೂ ಇಲ್ಲವೆಂದು ಕಾಣುತ್ತಿದೆ. ತಾಲ್ಲೂಕ್ ಮಟ್ಟದ ಆಸ್ಪತ್ರೆಯ ಸ್ಥಿತಿ ಈ ರೀತಿಯಾದರೆ, ಹಳ್ಳಿಗಳಲ್ಲಿರುವಂತಹ ಆಸ್ಪತ್ರೆಗಳ ಸ್ಥಿತಿಯನ್ನು ಹೇಳುವಂತೆಯೇ ಇಲ್ಲ. ನಾನು ಈ ಸಲ ವಿಠ್ಲದಿಂದ ಆರಿಸಿ ಬಂದಿದ್ದೇನೆ. ಅಲ್ಲಿಯ ಆಸ್ಪತ್ರೆಯಲ್ಲಿ ಕಳೆದ ಒಂದು ವರ್ಷದಿಂದ ಮೇಲ್ ಡಾಕ್ಟರ್ ಆಗಲೀ, ಲೇಡಿ ಡಾಕ್ಟರ್ ಆಗಲೀ ಇಲ್ಲ. ಬೇರೆ ಕಡೆಯಿಂದ ಡಾಕ್ಟರ್ ಯಾವಾಗ ಬರುತ್ತಾರೋ, ಯಾವಾಗ ಹೋಗುತ್ತಾರೋ ಗೊತ್ತಿಲ್ಲ. ರೋಗಿಗಳು ಇದ್ದಾಗ ಡಾಕ್ಟರ್ ಇರುವುದಿಲ್ಲ. ಡಾಕ್ಟರ್ ಇದ್ದರೆ ರೋಗಿಗಳು ಇರುವುದಿಲ್ಲ. ಪ್ರತಿ ಆಸ್ಪತ್ರೆಗೂ ಡಾಕ್ಟರ್‌ಗಳನ್ನು ನೇಮಕ ಮಾಡಲು ಏನು ತೊಂದರೆ ಇದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಪದವೀಧರರಾದವರು ಉದ್ಯೋಗಕ್ಕಾಗಿ ಕಾಯುತ್ತಿದ್ದಾರೆ. ಇಂತಹವರನ್ನು ನೇಮಕ ಮಾಡಿಕೊಂಡು ಎಲ್ಲ ಆಸ್ಪತ್ರೆಗಳಿಗೂ ಕಳುಹಿಸಿಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ೪೦ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯ ಇರಬೇಕು ಆದರೆ ನಾವು ಇನ್ನೂ ಆ ಮಟ್ಟಕ್ಕೆ ಬಂದಿಲ್ಲ ಎಂದು ತಾವೇ ಹೇಳಿದ್ದೀರಿ. ಸ್ವಾಮಿ, ನಾನು ಹೇಳುತ್ತೇನೆ ನಮ್ಮ ಕಡೆ ಪಾಠಶಾಲೆಗಳಲ್ಲಿ ೮೦ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರಿದ್ದಾರೆ ಮತ್ತು ಒಬ್ಬನೇ ಉಪಾಧ್ಯಾಯ ೪-೫ ತರಗತಿಗಳನ್ನು ನೋಡಿಕೊಳ್ಳತಕ್ಕ ಪರಿಸ್ಥಿತಿ ಬಂದಿದೆ. ತಾವು ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡುತ್ತಿಲ್ಲ, ಹಾಗೆ ಮಾಡುವಾಗ ಸಾರ್ವಜನಿಕರಿಂದ ವಂತಿಗೆಯನ್ನು ನಿರೀಕ್ಷಣೆ ಮಾಡುತ್ತೀರಿ. ಇದನ್ನೆಲ್ಲಾ ಬೆಟರ್‌ಮೆಂಟ್ ಕಮಿಟಿಯವರ ತಲೆಯ ಮೇಲೆ ಹಾಕುತ್ತೀರಿ. ಅವರು ಅದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ. ಭೂ ಸುಧಾರಣೆ ಇತ್ಯಾದಿ ಅನೇಕ ಕಾರ್ಯಕ್ರಮ ಬಂದಿದೆ. ಕೆಲವರು ಜನಗಳನ್ನು ಶೋಷಣೆ ಮಾಡಿ ಕೂಡಿಟ್ಟ ಹಣವನ್ನು ಇಂಥಾ ಕಾರ್ಯಗಳಿಗೆ ದಾನವಾಗಿ ಕೊಟ್ಟರೆ ಅವರ ಹೆಸರನ್ನು ಹಾಕಿಸುತ್ತಿದ್ದೀರಿ. ಆದರೆ ಈಗ ಏನು ಮಾಡುತ್ತೀರಿ ಎಂದು ಗೊತ್ತಿಲ್ಲ. ಇವತ್ತು ನಮ್ಮ ಕಡೆ ಸಾವಿರಾರು ಜನ ವಿದ್ಯಾಭ್ಯಾಸ ಕಲಿತು ನಿರುದ್ಯೋಗಿಗಳಾಗಿ ಮನೆಯಲ್ಲಿ ಕುಳಿತಿದ್ದಾರೆ ಅವರನ್ನಾದರೂ ಕೆಲಸಕ್ಕೆ ತೆಗೆದುಕೊಂಡು ಅನುಕೂಲ ಮಾಡಿಕೊಡಿ.

ಇನ್ನು ಭೂಸುಧಾರಣೆಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ ಈ ಭೂ ನ್ಯಾಯ ಮಂಡಲಿಗಳಲ್ಲಿದ್ದ ಖಾಸಗೀ ಸದಸ್ಯರನ್ನು ಮನ್ನಾ ಮಾಡಿದ್ದಾರೆ ಮಾನ್ಯರಾಜ್ಯಪಾಲರು ಕೆಲವು ತಿದ್ದುಪಡಿಗಳನ್ನು ಮಾಡುವ ಬಗ್ಗೆ ಹೇಳಿದ್ದರು. ಆದರೆ ಅಷ್ಟು ಹೊತ್ತಿಗೆ ಅದೇನು ಬಂತೋ ಗೊತ್ತಿಲ್ಲ. ಬಹುಶಃ ರಾಜ್ಯದ ಅನೇಕ ಕಡೆಗಳಿಂದ ಪ್ರತಿಕೂಲ ಕಂಡು ಬಂದದ್ದರಿಂದ ಹೀಗೆ ಮಾಡಿರಬಹುದೆಂದು ಕಾಣುತ್ತದೆ. ಈ ಭೂನ್ಯಾಯ ಮಂಡಲಿಗಳಲ್ಲಿ ಅಧಿಕಾರಿಗಳನ್ನು ಸದಸ್ಯರನ್ನಾಗಿ ಹಾಕಬೇಕೆಂದು ಹೇಳಿದ್ದರು. ಆದರೆ ಅವರು ಅದನ್ನು ಮಾಡಲಿಲ್ಲ. ಸೆಕ್ಷನ್ ೪೮ (ಸಿ) ಪ್ರಕಾರ ರೈತರಿಗೆ ತಾತ್ಕಾಲಿಕ ವಾದ ರಕ್ಷಣೆಯನ್ನು ಕೊಡುವ ಬಗ್ಗೆ ಈ ಭೂನ್ಯಾಯ ಮಂಡಲಿಗಳಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಇವತ್ತು ರೈತರು ಮುನ್ಸೀಫ್ ಕೋರ್ಟಿಗೆ ಹೋಗಿ ತಾತ್ಕಾಲಿಕ ತಡೆಯಾಜ್ಞೆ ತರುವಂತಿಲ್ಲ. ಅಥವಾ ಇನ್ನು ಯಾವುದೇ ಕೋರ್ಟಿಗೂ ಹೋಗುವಂತಿಲ್ಲ. ಏನಿದ್ದರೂ ಅವರು ಈ ಟ್ರಿಬ್ಯನಲ್‌ಗೇ ಬರಬೇಕು. ತಾವು ಈ ಟ್ರಿಬ್ಯುನಲ್‌ನ್ನು ಸಡಿಲಗೊಳಿಸಿದರೆ ಸಾವಿರಾರು ಜನರು ತೊಂದರೆಗೆ ಒಳಗಾಗುತ್ತಾರೆ. ತಾವು ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಟ್ರಿಬ್ಯುನಲ್‌ಗಳನ್ನು ಮಾಡುವುದಾದರೆ ಕನಿಷ್ಟ ಇನ್ನೂ ಒಂದು ತಿಂಗಳಾದರೂ ಆಗುತ್ತದೆ. ಈ ಸಂದರ್ಭದಲ್ಲಿ ಹಿಂದಿನ ಸಾರಿ ಟ್ರಿಬ್ಯುನಲ್‌ಗಳಲ್ಲಿ ಯಾವ ಯಾವ ಸದಸ್ಯರ ಮೇಲೆ ಆರೋಪಗಳು ಇದ್ದುವು ಎಂಬುದನ್ನು ತಾವು ವಿಚಾರ ಮಾಡಬೇಕು. ಸ್ವಾಮಿ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಅನೇಕ ಕಡೆಗಳಲ್ಲಿ ಇಂಥವರಿಗೆ ಜಮೀನು ಕೊಡ ಬೇಕೆಂದು ಲ್ಯಾಂಡ್ ಟ್ರಿಬ್ಯುನಲ್‌ನಿಂದ ಆರ್ಡರ್ ಆಗಿದ್ದರೂ ಕೂಡ ಭೂ ಮಾಲೀಕರು ಆ ಭೂಮಿ ಯನ್ನು ಕೊಡದೆ ಭತ್ತ ಬೆಳೆಯುವ ಜಾಗದಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿದ್ದಾರೆ, ಇದನ್ನು ತಾವು ಹೇಗೆ ತಡೆಯುತ್ತೀರಿ ? ಮೊನ್ನೆ ಇದೇ ಸದನದಲ್ಲಿ ನೀರಿನ ಹಂಚಿಕೆ ವಿವಾದಗಳ ಬಗ್ಗೆ, ಜಮೀನು ವಿವಾದಗಳ ಬಗೆ ಗಲಾಟೆಗಳಾಗಿವೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ವಿಳಂಬ ಮಾಡದೆ ತಾತ್ಕಾಲಿಕ ವಾದ ರಕ್ಷಣೆಯನ್ನು ರೈತರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಬಂಟ್ವಾಳ ತಾಲ್ಲೂಕ್‌ನಲ್ಲಿ ಪಾರ್ಲಿಮೆಂಟ್ ಚುನಾವಣೆಗೆ ಮುಂದೆ ಈ ಟ್ರಿಬ್ಯುನಲ್ ಮೀಟಿಂಗ್ ನಡೆದದ್ದು. ಅಲ್ಲಿಂದ ಇದುವರೆಗೂ ಈ ಮೀಟಿಂಗ್ ನಡೆದಿಲ್ಲ. ಇದಾದಮೇಲೆ ಅಲ್ಲಿದ್ದ ಅಸಿಸ್ಟೆಂಟ್ ಕಮಿಷನರವರನ್ನು ಬೇರೆ ಕಡೆಗೆ ವರ್ಗ ಮಾಡಿದ್ದೀರಿ. ಆದರೆ ಇದುವರೆಗೂ ಅಲ್ಲಿ ಇನ್ನೊಬ್ಬ ಅಸ್ಸಿಟೆಂಟ್ ಕಮಿಷನರ್‌ರವನ್ನು ಹಾಕಿ ಟ್ರಿಬ್ಯುನಲ್ ನಡೆಸುವುದಕ್ಕೆ ಸಾಧ್ಯವಾಗಿಲ್ಲ. ಹೀಗಾದರೆ ರೈತರಿಗೆ ಹೇಗೆ ಅನುಕೂಲ ಮಾಡುವುದಕ್ಕಾಗುತ್ತದೆ. ಅಲ್ಲಿ ಈಗ ಸರ್ವೆ ಆಗಬೇಕು, ಸ್ಥಳಪರಿಶೀಲನೆ ಆಗಬೇಕು, ಇನ್ನೂ ಏನೇನೋ ಕೆಲಸಗಳಾಗಬೇಕಾಗಿದೆ. ಇದೆಲ್ಲಾ ಆಗಬೇಕಾದರೆ ಸರ್ಕಾರದವರು ತುರ್ತಾಗಿ ಅಧಿಕಾರಿಗಳನ್ನು ಅಲ್ಲಿ ನೇಮಕಮಾಡಬೇಕು. ಇವತ್ತು ಏನಾಗಿದೆ ಎಂದರೆ ತಾವು ಅಲ್ಲಿಗೆ ಯಾರನ್ನು ಪೋಸ್ಟ್ ಮಾಡಿದರೂ ಅವರು ಅಲ್ಲಿಗೆ ಹೋಗಿ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅಂಥವರನ್ನು ತಾವು ಇಲ್ಲಿ ಸೆಕ್ರೆಟರಿಯೇಟ್‌ನಲ್ಲಿ ಏರ್ ಕಂಡೀಷನ್ ರೂಂ ನಲ್ಲಿ ಉನ್ನತ ಹುದ್ದೆ ಕೊಟ್ಟು ಕೂಡಿಸುತ್ತಿದ್ದೀರಿ. ನನಗೆ ಗೊತ್ತಿರುವಂತೆ ನಮ್ಮ ಬಂಟ್ವಾಳ ತಾಲ್ಲೂಕಿಗೆ ಇಬ್ಬರು ಅಸಿಸ್ಟೆಂಟ್ ಕಮಿಷನರ್‌ಗಳನ್ನು ತಾವು ವರ್ಗ ಮಾಡಿದ್ದೀರಿ. ಆದರೆ ಅವರು ಅಲ್ಲಿಗೆ ಹೋಗಿಲ್ಲ ಅವರು ಈ ಬೆಂಗಳೂರಿನಲ್ಲಿ ಮೆರೆಯುತ್ತಿದ್ದಾರೆ. ತಾವು ಮೊದಲು ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು.

ಇನ್ನು ವಿಧವೆಯರಿಗೆ, ಅಂಗವಿಕಲರಿಗೆ, ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಪರಿಹಾರವನ್ನು ಕೊಡುವುದಾಗಿ ಹೇಳಿದ್ದೀರಿ. ನನಗೆ ಗೊತ್ತಿರುವಂತೆ ಅವರ ಹೆಸರಿಗೆ ಜಮೀನು ಆಗಿದ್ದು ಅವರ ಪರಿಹಾರವನ್ನು ಒಂದೇ ಗಂಟಿನಲ್ಲಿ ಕೊಡಲು ಶಕ್ತಿ ಇರುವವರೂ ಇದ್ದಾರೆ. ಶಕ್ತಿ ಇಲ್ಲದಿರುವವರೂ ಇದ್ದಾರೆ. ಸ್ವಾಮಿ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಅಪ್ರಾಪ್ತ ವಯಸ್ಕರಿಗೆ, ಅಂಗವಿಕಲರಿಗೆ, ವಿಧವೆಯರಿಗೆ ಒಂದೇ ಕಂತಿನಲ್ಲಿ ಪರಿಹಾರವನ್ನು ಕೊಡುವುದರಿಂದ ಸರ್ಕಾರಕ್ಕೆ ಯಾವ ನಷ್ಟವೂ ಆಗುವುದಿಲ್ಲ. ಸ್ವಾಮಿ ಇದರಲ್ಲಿ ಎರಡು ಪ್ರಶ್ನೆ ಉದ್ಭವವಾಗುತ್ತದೆ. ಮೊದಲನೆಯದಾಗಿ ಹೇಳುವು ದಾದರೆ, ಕಾನೂನಿನಲ್ಲಿ ತಿದ್ದುಪಡಿಯಾಗಬೇಕು. ಏಕೆಂದರೆ ಈ ಪರಿಹಾರ ಧನವನ್ನು ಒಂದೇ ಕಂತಿನಲ್ಲಿ ಕೊಡುವುದಕ್ಕೆ ಯಾರಿಗೆ ಶಕ್ತಿ ಇರುತ್ತದೋ ಅವರು ಕೊಡುತ್ತಾರೆ. ಆದರೆ ಇದು ಎಲ್ಲರಿಗೂ ಸಾಧ್ಯವಿಲ್ಲ. ಇಂಥ ಸಾಧ್ಯವಿಲ್ಲದ ಜನ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತಾರೆ. ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ರೈತ ಸಾಲ ತಂದರೆ ೧೧ ಪರ್ಸೆಂಟ್ ಬಡ್ಡಿ, ಆದರೆ ಅದೇ ರೈತ ತಾನು ಬ್ಯಾಂಕ್‌ನಲ್ಲಿಟ್ಟ ಹಣಕ್ಕೆ ೫ ಪರ್ಸೆಂಟ್ ಬಡ್ಡಿ. ಇದು ಯಾವ ನ್ಯಾಯ ? ಇದರಲ್ಲಿ ಸರ್ಕಾರ

ಲಾಭ ಮಾಡುವುದಕ್ಕೆ ಏಕೆ ಹೋಗಬೇಕು ? ಆದ್ದರಿಂದ ನಾನು ಹೇಳುವುದೇನೆಂದರೆ ಈ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಬಡ್ಡಿ ದರ ಏನಿದೆ ಅದನ್ನು ಕಡಿಮೆ ಮಾಡಬೇಕು. ಇದನ್ನು ಕಡಿಮೆ ಮಾಡಬೇಕಾದರೆ ರಿಸರ್ವ್ ಬ್ಯಾಂಕ್‌ನವರ ಒಪ್ಪಿಗೆ ಬೇಕು.

ತಾವು ಅದರ ಬಗ್ಗೆ ವ್ಯವಹಾರ ಮಾಡಿ ಎಂದು ಒತ್ತಾಯ ಮಾಡುತ್ತೇನೆ, ಹಾಗೆಯೇ ವಿರೋಧ ಪಕ್ಷದ ನಾಯಕರು ಸಹ ಈ ಸಲಹೆಯನ್ನು ಕೇಂದ್ರ ಸರ್ಕಾರದವರ ಮುಂದಿಟ್ಟು ಇದಕ್ಕೆ ಅವರು ಒಪ್ಪುವ ಹಾಗೆ ಪ್ರಭಾವವನ್ನು ಬೀರುವುದಕ್ಕೆ ಪ್ರಯತ್ನ ಮಾಡಬೇಕೆಂಬ ನಂಬಿಕೆ ಇದೆ. ಕಡಿಮೆ ಬಡ್ಡಿ ಸಿಕ್ಕುವ ಹಾಗೆ ಮಾಡಬೇಕು. ಎರಡನೆಯದಾಗಿ ಅವರು ಕೊಟ್ಟ ಮೇಲೆ, ಹಣ ತುಂಬಿದ ಮೇಲೆ ಆ ಹಣ ವನ್ನು ತಾವು ಮಾತ್ರ ಕಂತಿನ ಮೇಲೆ ಭೂ ಮಾಲೀಕರಿಗೆ ಕೊಡುತ್ತಿದ್ದೀರಿ ಇದರಿಂದ ಲಾಭ ಹೊಡೆಯ ಬಹುದೆಂದು ಯೋಚನೆ ಮಾಡಬಾರದು. ಅವರಲ್ಲಿರತಕ್ಕಂತ ಜಮೀನನ್ನು ಕಿತ್ತುಕೊಂಡ ಮೇಲೆ ಅವರು ನೆಮ್ಮದಿಯಿಂದ ಬಾಳುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದಿದ್ದರೆ ನಿಮ್ಮ ಸಮಾಜವಾದಿ ಕಾರ್ಯಕ್ರಮಕ್ಕೆ ಭಂಗ ಬಂದಂತೆ ಆಗುತ್ತದೆ, ಆದುದರಿಂದ ಆ ರೀತಿ ಭಂಗ ಬಾರದಂತೆ ಮಾಡುತ್ತೀ ರೆಂದು ಭಾವಿಸುತ್ತೇನೆ.

೫–೩೦ ಪಿ. ಎಂ.

ಇನ್ನು ಕೊನೆಯದಾಗಿ, ಈ ಭೂ ಸುಧಾರಣಾ ಕಾನೂನಿಗೆ ಒಂದು ಬಹಳ ಮುಖ್ಯವಾದ ತಿದ್ದು ಪಡಿ ಆಗಬೇಕಾಗಿರುವುದೇನೆಂದರೆ, ಇವತ್ತು ಗೇಣಿದಾರರಿಗೆ ಮತ್ತು ಸಾಗು ಮಾಡತಕ್ಕಂಥ ರೈತರಿಗೆ ಸಾಕಷ್ಟು ರಕ್ಷಣೆ ಈ ಶಾಸನದಿಂದ ಮಾಡಿಕೊಟ್ಟಿದ್ದೀರಿ. ಆದರೆ ಅದೇ ರೀತಿ ಒಕ್ಕಲು ಎತ್ತಿ, ರೈತರು ಜಮೀನಿಲ್ಲದೆ ಕೃ . ಕಾರ್ಮಿಕರು ಎಷ್ಟೋ ವರ್ಷಗಳಿಂದ ಮನೆ ಕಟ್ಟಿಕೊಂಡು ಕೂತಿದ್ದರು, ಭೂಮಿ ಯನ್ನು ಉಳುವಾಗ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಕೂತಿದ್ದರು, ಅಂಥವರಿಗೆ ಇವತ್ತು ರಕ್ಷಣೆ ಕೊಡಬೇಕು, ಅದು ಈಗಿನ ಶಾಸನದಲ್ಲಿ ಇಲ್ಲ ಅದನ್ನು ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ಹಲವಾರು ಸಾರಿ ತಂದಿದ್ದೇವೆ. ಯಾರು ಬೀಡು ಒಕ್ಕಲು ಇದ್ದಾರೆ, ನಮ್ಮ ಕಡೆ ಬೀಡು ಒಕ್ಕಲೆಂದು ಹೇಳುತ್ತೇವೆ ಅಂಥವರಿಗ ಯಾವುದೇ ರಕ್ಷಣೆ ಇಲ್ಲ. ಅಂಥವರಿಗೆ ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ, ಅವರಲ್ಲಿ ಮುಖ್ಯವಾಗಿ ಬೆಂಗಾಡುಜನ, ಶೆಡ್ಯೂಲ್ ಟ್ರೈಬ್ಸ್‌ಜನವೇ ಹೆಚ್ಚಾಗಿದ್ದಾರೆ ಆದುದರಿಂದ ಅಂಥವರಿಗೆ ತಾವು ಶಾಸನಕ್ಕೆ ತಿದ್ದುಪಡಿ ತಂದು ಅವರಿಗೆಲ್ಲಾ ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ. ಹಾಗೂ ಅದನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವ ಬಗ್ಗೆ ನಮಗೆ ಭರವಸೆ ಕೊಡಬೇಕೆಂದು ಹೇಳುತ್ತೇನೆ. ಈ ಕರ್ಯಗಳನ್ನು ಮಾಡುವಂಥಾ ಸಂದರ್ಭದಲ್ಲಿ, ಕಳೆದ ೬ ವರ್ಷಗಳಿಂದ ತಾವು ಮಾಡಿದಂಥ ಎಲ್ಲಾ ಉತ್ತಮ ಕಾರ್ಯಗಳಿಗೆ ಅದರಲ್ಲೂ ಬಡ ಜನತೆಗೆ ಅನುಕೂಲವಾಗುವಂಥ ಕಾರ್ಯ ಗಳಿಗೆ ಈ ಸದನದಲ್ಲಿ ಯಾರೂ ಅಡ್ಡಿ ಬರುತ್ತಿರಲಿಲ್ಲ, ಕೆಲವರು ಅಡ್ಡಿ ಬಂದಿರಬಹುದು. ಆದರಲ್ಲೂ ನಮ್ಮ ಪಕ್ಷದವರು ಸಂಪೂರ್ಣವಾಗಿ ನಿಮಗೆ ಬೆಂಬಲ ಕೊಟ್ಟು, ಪ್ರೋತ್ಸಾಹ ಕೊಟ್ಟು ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಸಹಾಯ ನೀಡುತ್ತಾ ಬಂದಿದ್ದಾರೆ. ಮುಂದೆ ಕೂಡ ಇಂಥಾ ಕಾರ್ಯಗಳನ್ನು ತಾವು ಮಾಡುವಾಗ ನಮ್ಮ ಸಂಪೂರ್ಣ ಬೆಂಬಲ ಸಹಕಾರ ಕೊಡುತ್ತೇವೆಂದು ಹೇಳಬಯಸುತ್ತೇನೆ. ಆದರೆ ತಾವು ಕಾರ್ಮಿಕರ ಬಗ್ಗೆ, ರೈತರ ಬಗ್ಗೆ, ಈ ಬೀಡು ಒಕ್ಕಲುಗಳ ಬಗ್ಗೆ, ಈಡಿಗರ ಜನಾಂಗ ದವರ ಬಗ್ಗೆ ತಾವು ಅಸಡ್ಡೆ ಮನೋಭಾವನೆಯನ್ನು ತಾಳಿದರೆ ಅವರ ಎಲ್ಲಾ ಹೋರಾಟಗಳಲ್ಲೂ ಕೂಡ ನಾವು ಭಾಗವಹಿಸಿ ಸರ್ಕಾರಕ್ಕೆ ಒತ್ತಾಯ ಮಾಡತಕ್ಕ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಮುಂದೆ ಹೋಗಬೇಕಾಗುತ್ತದೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಸಭಾಧ್ಯಕ್ಷರೇ ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣವಾಗಿ ತಿರುವಿ ಹಾಕಿ ನೋಡಿದಾಗ ಒಂದು ವರ್ಷಕ್ಕೆ ಆಗುವಷ್ಟು ನೀರಾವರಿ ಸಂಗ್ರಹ, ಗ್ರಾಮಾಂ ತರ ಪ್ರದೇಶಗಳಲ್ಲಿ ವೈದ್ಯಕೀಯ, ಹಾಗೂ ೭,೫೦೦ ಜನಗಳಿಗೆ ಒಬ್ಬ ಡಾಕ್ಟರ್ ಅದೇ ರೀತಿ ಆರೋಗ್ಯ ಮತ್ತು ಕುಟುಂಬ ಯೋಜನೆಗಳಿಗೆ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚು ಮಾಡುತ್ತಿರುವುದು. ಪೌಷ್ಟಿಕ ಆಹಾರಕ್ಕೆ ಅದರಲ್ಲೂ ೬ ವರ್ಷಕ್ಕಿಂತ ಚಿಕ್ಕ ಮಕ್ಕಳುಗಳಿಗೆ, ಮತ್ತು ಗರ್ಭಿಣಿ ಹೆಂಗಸರು ಗಳಿಗಾಗಿ ಒಂದು ಕೋಟಿ ರೂಪಾಯಿ ವೆಚ್ಚ, ಹರಿಜನ ಗಿರಿಜನ ಮಕ್ಕಳಿಗೆ ೨೫೦ ಪ್ರೀ ಪ್ರೈಮರಿ ಸ್ಕೂಲ್‌ಗಳು ಅದೇ ರೀತಿ ಅವರಿಗೆ ೧೮ ಪರ್ಸೆಂಟ್ ಉದ್ಯೋಗಾವಕಾಶಗಳಲ್ಲಿ ಮೀಸಲು, ಆ ಮೇಲೆ

ಪ್ರೌಢಶಾಲೆಗಳಿಗೆ ೨೩೦ ಹೊಸ ಕಟ್ಟಡಗಳು ಅದೇ ರೀತಿ ಅಂಗವಿಕಲರಿಗೆ, ವೃದ್ಧರಿಗೆ ವಿಶ್ರಾಂತಿ ವೇತನಗಳಿಗಾಗಿ ಸುಮಾರು ೮ ಕೋಟಿ ರೂಪಾಯಿಗಳಷ್ಟು ಇಟ್ಟಿದ್ದಾರೆ, ಆ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ೧೯೭೯ರ ಮಾರ್ಚಿವರೆಗೆ ಮಾಡಿ ಮುಗಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನೀರಾವರಿಗೆ ಹೆಚ್ಚು ಅನುಕೂಲ ಮಾಡುತ್ತಿರುವುದರ ಜೊತೆಗೆ ರಸ್ತೆ ನಿರ್ಮಾಣ ಕಾರ್ಯಗಳಿಗೆ ಮತ್ತು ಇನ್ನು ಮುಂತಾದ ಉತ್ತಮವಾದ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಏತಕ್ಕೆಂದರೆ ನಾವು ಹಿಂದಿನ ಚರಿತ್ರೆ ಓದಿದಾಗ ಗೊತ್ತಾಗುತ್ತದೆ. ದಿ. ನೆಹರೂರವರ ಸಾಮಾಜಿಕ ಕ್ರಾಂತಿ ಮತ್ತು ಬಡವರು ಯೋಗ್ಯ ರೀತಿಯಲ್ಲಿ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಮತ್ತು ಜಮೀನು ಉಳುವವನಿಗೆ ಜಮೀನು ಕೊಡಬೇಕೆಂದು ಹೇಳಿದ್ದರು. ಅದು ಅವರ ಸಮಾಜವಾದ. ಅದೇರೀತಿ ಗಾಂಧಿ ಸಮಾಜ ವಾದವೇನೆಂದರೆ, ಬಡವರ ಉದ್ಧಾರ ಮಾಡಬೇಕು, ನಮ್ಮಲ್ಲಿ ಮಾನವೀಯತೆ ಬೆಳೆಯಬೇಕು, ಹರಿಜನರು, ಅಲ್ಪಸಂಖ್ಯಾತರು ದೀನ ದಲಿತರು ಬಡವರು ಎಲ್ಲರನ್ನೂ ಉದ್ಧಾರ ಮಾಡಬೇಕು ಎನ್ನುವುದು ಅವರ ಸಮಾಜವಾದ. ಅದೇ ರೀತಿ ನೇತಾಜಿ ಸುಭಾಶ ಚಂದ್ರಬೋಸ್‌ರವರ ತತ್ವವೇನೆಂದರೆ ಬಡವರ ಉದ್ಧಾರ ಮಾಡಬೇಕು. ಸ್ವಾಮಿ ವಿವೇಕಾನಂದರವರು ನಮ್ಮ ದೇಶದಲ್ಲಿ ದರಿದ್ರನಾರಾಯಣ ಉದ್ಧಾರವಾದರೆ ನಮ್ಮ ದೇಶ ಮುಂದುವರಿಯುತ್ತದೆಂದು ಹೇಳಿದ್ದಾರೆ. ಅಂದರೆ ನಾರಾಯಣ ಎಂದರೆ ರೈತರು ಉಳುವವರು, ಬಡ ರೈತರೇ ನಾರಾಯಣ. ಇದೇ ರೀತಿ ಕಾರ್ಲ್ ಮಾರ್ಕ್ಸ್ ಮತ್ತು ಫೆಡ್ರಿಕ್ ಮುಂತಾದ ಮಹನೀಯರುಗಳು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ ನಮ್ಮ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ಇದೆಲ್ಲವನ್ನೂ ಜಾರಿಗೆ ತಂದಿದ್ದಾರೆ. ಕೆಲಸಗಾರರಿಗೆ ದುಡಿಮೆ ಮತ್ತು ನಮಗೆ ಬೇಕಾದ ಅವಶ್ಯಕ ವಸ್ತುಗಳು, ಆಹಾರ ಧಾನ್ಯಗಳು ನಮಗೆ ದೊರಕುವಂತೆ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಅದಕ್ಕಾಗಿ ನಮ್ಮ ಸರ್ಕಾರದವರು ೨೦ ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಹಿಂದೆ ೧೯೩೪ರಲ್ಲಿಯೇ ಆಲ್ ಇಂಡಿಯಾ ಸೋಷಿಯಲಿಸ್ಟ್ ಕಾನ್‌ಫರೆನ್ಸ್‌ನಲ್ಲಿ ಶ್ರೀ ಜಯ ಪ್ರಕಾಶ್‌ಗೋರೆಯವರ ನಾಯಕತ್ವದಲ್ಲಿ ಜಮೀನನ್ನು ಉಳುವವನಿಗೇ ಕೊಡಬೇಕೆಂದು ಘೋಷಿಸಿದ್ದರು. ಆದರೆ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ ಆದರೆ ನಮ್ಮ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಅವರು ಹಾಕಿಕೊಂಡಿದ್ದ ೨೦ ಅಂಶಗಳ ಕಾರ್ಯಕ್ರಮಗಳ ಸೂತ್ರಗಳ ಅನುಸಾರವಾಗಿ ನಮ್ಮ ಶ್ರೀ ದೇವರಾಜ್ ಅರಸ್‌ರವರು ದಿಟ್ಟತನದ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ.

ಮಾನ್ಯ ಅಧ್ಯಕ್ಷರೆ ಈ ವಿಚಾರದ ಬಗ್ಗೆ ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡುವವರು ಇರುವುದರಿಂದ ನಾನು ಹೆಚ್ಚಿನ ಕಾಲಾವಕಾಶವನ್ನು ತೆಗೆದು ಕೊಳ್ಳಲು ಇಷ್ಟಪಡದೆ ಈಗ ಸದನದ ಮುಂದೆ ಮಂಡಿಸಿರುವ ರಾಜ್ಯಪಾಲರ ಭಾಷಣವನ್ನು ಒಮ್ಮತವಾಗಿ ಅಭಿನಂದಿಸಲೇಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

† SRI QAMARUL ISLAM (Gulbarga).—Sir, I have been given an opportunity to thank the Governors Address. It is my privilege on behalf of the Indian Muslim League and on behalf of my own and on behalf of my Muslim colleagues. It is only customary and functional to thank Governors Address. The Governor is a constitutional authority appointed by the Centre and unfortunately the Government of Karnataka led by Congress (I) prepares the address and the Governor appointed by the Janta Party accepts the same and read out before this House. Any way, I will just take up the first point.

Regarding education, it will be a surprise to the House. The area from which I belong is called Hyderabad-Karnataka area. Hyderabad-Karnataka belonged to Nizam before the reorganization that is before 1956, where Urdu was the official language. It is mentioned in the Governors Address that about 230 buildings have been constructed for the schools and you will be surprised to know that a teacher

who is not knowing urdu was appoited as teacher for teaching students in our area. I can give number of examples here, So, it is really a shame on the part of the Government about the recognition of urdu language in our State...

A MEMBER.—Point of Order.

MR. CHAIRMAN.—I am sorry, the Hon'ble Members should bear with me. Let the hon'ble member continue his speech.

SRI QAMARUL ISLAM.—Sir, there are four subject inspectors belonging to DDPI. Out of the four subject inspectors there are three subject inspectors whose medium of instruction is Kannada and they have been appointed as Subject Inspectors in Urdu speaking area. This is the fate of Urdu knowing teachers in Karnataka. Another thing I would like to say is, when I visited a primary school building of Shapur, there is no roof to that building. The condition of the building is also not satisfactory. During summer season, the school master asks the students to go home, because of the sun rays that falls directly on the building and during rainy season, the school master asks the students not to come to the school, because the building is without roof. When I visited the building, the people of that area asked me that since I am an elected member of that constituency I should do justice to them, to hear their grievance and represent the case before the Government. Therefore, I request through you to the Government of Karnataka that they must take care of these fundamental requirements of the educational Institutions.

Regarding the second point, I do not want to go into the details. You have made a statement before this House that the water problem in Gulbarga will be solved. But, still there is scarcity of water in Gulbarga. The people of Gulbarga will not get water after a few days. I have received telegrams from the President of the Cloth Merchants Association, President, Super Market Association, Sir, I would like to read the telegram received from the President, Water Scarcity Committee, before this House. "Water problem getting worse. Contact the authorities". There is another telegram regarding water supply position in Gulbarga. It read "most critical inspite of huge expenditure on emergency water supply". Request your Honour to send water supply land army or any other agency". They have also send the telegrams and letters to the Hon'ble Chief Minister, Minister for Municipal Administration and Minister for Animal Husbandry. In this House a statement was made a few days back that 12 bore-wells will be taken up in Gulbarga. Sir, I would like to tell you that there are 69 borewells and out of that 69 borewells 44 have already been dugged in the year 1972 and there was a promise by Mr. Basavalingappa, hon'ble Minister for Revenue that the Government would

dig 100 borewells in Gulbarga. But, after that promise only 25 bore-wells have been taken up. The population of Gulbarga is 2,70,000 and there is a Bosga tank. The capacity of the tank is 2,625 million gallons as per the data collected by the Department. The people of Gulbarga requires nearly 925 million gallons per year. Since it is situated in the hilly region, the pulstating will be high and that comes to 1850 million gallons to Gulbarga. There was a scheme to overcome water scarcity in the area and there were repeated assurance from the Government to complete the same. But till day the scheme has not been completed. I am hearing this from childhood from the time of our Ex. Chief Minister Mr. Veerendra Patil. But assurances have been given that we will get the water in the month of August. When I have attended the meeting of the Co-ordination Committee in the Deputy Commissioner's Office I have been told that there is a bore-well in the Shaha Bazar. It is only on the paper, when I actually visited, there is no borewell in the Shaha Bazar. So, this is the way in which the Hon'ble Ministers are getting information from the concerned Department. The concerned Minister should come and inspect the spot. It is my duty to get the water for the people because they have elected me and sent me to represent their grievances before this House. Therefore, I request through the Speaker to the Hon'ble Minister that they must tour Gulbarga and make arrangement to ease the situation by providing water to the people. They must supply water to the people.

There is one more scheme known as Kodinur Bore well scheme. I am a graduate engineer. I discussed this scheme with the Superintending Engineer. If this scheme is implemented we can supply water to the S. V. College Tank and through that tank one-third of Gulbarga can be supplied with water.

Regarding siteless persons I really appreciate the scheme of the Government of Karnataka in this regard. They are giving sites to siteless persons. Recently they have given sites to about 39,000 persons. 7.89 lakh families have been given sites. In Gulbarga District many sites have been given. 22% of the persons living in this district are Muslims. But what is the percentage of sites given to them? Not even 0.5% of them has been given sites. This is the injustice going on so far as the minorities are concerned. What is the position in this Secretariat? I tell you that not a single Muslim Secretary is there in Vidhana Soudha. Not a single Muslim Deputy Secretary is there in Vidhana Soudha. In 1956 there were 22 IAS and MAS Muslim officers in Vidhana Soudha. Now in the IAS cadre there are one or two of them; the number is diminishing and it will become almost nil.

In 1974 we have formed Recruiting Committee and we have given chances to Muslims to serve on that committee to recruit Class III and IV officials. As far as the higher posts are concerned, we are recruiting less and less of them. In this connection I wish to make a suggestion regarding appointments to Muslim minorities. When there is 40% reservation for backward classes, why not give 12% reservation for the Muslim minorities? Really this step will win the hearts of the minorities and Karnataka will lead the other States in this respect. So, I request the hon. Members of this house that they must accept the suggestion that 12% of the posts in Government must be reserved for the Muslims.

Regarding wakf properties, I may inform the House that the henchmen of the Ex-Minister whom I have defeated in the election and his relatives are enjoying all the properties. They are in the committees. I would request the Government to see that the henchmen of this Ex-Minister should not be appointed in these committees The committees should be reconstituted.

Regarding the voters'list, to give vote is legitimate right of a citizen. There are many States where the voters' list is in Urdu. In this old Nizam area where 60% of the people know and talk Urdu, the voters' list must be in Urdu. Our friend Sri A. V. Patil talks very good urdu. Like that there are many people who know Urdu. I therefore request that the voter's list should be in Urdu so that the legitimate right to vote can be exercised by the Urdu-knowing people in my district. When they go to the polling booths to vote, many a time they find that their name is written in a wrong way in Kannada.

Regarding Municipal elections, an assurance has been given that they will be conducted. But I learn that there are proposals from some of the members that they should be postponed. I request the Government through you Sir, that they should not be postponed. Let the elected representatives come to the municipalities, so that they can solve the problems of the people. They are the real representatives of the people. Hence I request that the election should not be postponed.

Thank you.

† ಶ್ರೀ ಆನಂದ ಕುಂದ ಹೆಗಡೆ (ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವ ಹಿನ್ನೆಲೆಯಲ್ಲಿ ರಾಜ್ಯಪಾಲರು ರಾಜ್ಯದ ಇಂದು ಮತ್ತು ನಾಳೆಯ ದೃಷ್ಟಿಯಿಂದ ಹಾಗೂ ದೂರದೃಷ್ಟಿಯಿಂದ ಸಮಗ್ರ ಯೋಜನೆಗಳ ಬಗ್ಗೆ ಸ್ಥೂಲವಾಗಿ ಹೇಳಿದ್ದಾರೆ. ಒಂದು ರಾಜ್ಯದ ಕ್ಷೇಮಾಭಿವೃದ್ಧಿ ಹಾಗೂ ಭವಿಷ್ಯವು ಅದರಲ್ಲಿರುವ ಜನರ ಮನೋಧರ್ಮ, ಅವರು ಆಲೋಚಿಸುವ ರೀತಿ ದಕ್ಷತೆ ಮತ್ತು ಯೋಗ್ಯತೆಗಳನ್ನು ಅವಲಂಬಿಸಿಕೊಂಡಿದೆ. ಈ ರಾಜ್ಯಕ್ಕೆ ವ್ಯಾಪಕವಾದ ಸಮಸ್ಯೆಗಳು ಇವೆ. ಈ ಸಮಸ್ಯೆಗಳ ವಿವರಗಳು ಕೂಡ ಅಷ್ಟೇ ವ್ಯಾಪಕವಾಗಿದೆ. ಅದರ ಜೊತೆಯಲ್ಲಿ ಹೊಸ ಸಮಸ್ಯೆಗಳೂ ಇವೆ. ಈ ಹೊಸ ಸಮಸ್ಯೆಗಳ ಪರಿಹಾರಕ್ಕಾಗಿ ಹೊಸ ಮಾಧ್ಯಮ

ಗಳನ್ನು ಕಂಡುಕೊಳ್ಳುವ ಅವಶ್ಯಕತೆ ಇದೆ. ಮುಖ್ಯವಾಗಿ ನೀರು ಅಥವಾ ನೀರಾವರಿ ವಿಚಾರವನ್ನು ತೆಗೆದುಕೊಳ್ಳುವುದಾದರೆ ಅದಕ್ಕೆ ಸಾಕಷ್ಟು ಪ್ರಯತ್ನಗಳು ನಡೆದಿದೆ. ಆದರೆ ನಿರಂತರವಾಗಿ ನಡೆಯುವ ಇಲ್ಲಿಯ ಚಿಂತನೆ ಹಾಗೂ ವಿಮರ್ಶೆಗಳಲ್ಲಿ ಅದು ಏನೂ ಸಾಲದು ಎಂದು ಕಾಣುತ್ತದೆ. ಮಾತ್ರವಲ್ಲ ಕೃಷಿಗೇ ಆಗಲಿ, ಬೆಳೆಯುವ ಪಟ್ಟಣಗಳಿಗೆ ಕುಡಿಯುವ ನೀರಿಗೇ ಆಗಲಿ ಜಲಮೂಲಗಳನ್ನು ಬಳಸಿದರೆ ಸಾಲದು ಹಾಗೂ ನೆಲಾಂತರ್ಗತ ಜಲವನ್ನು ಬಳಸಿದರೂ ಸಾಲದು ಎಂದು ಕಾಣುತ್ತದೆ. ಈ ದೃಷ್ಟಿಯಿಂದ ನನ್ನದೊಂದು ಸಲಹೆ ಏನೆಂದರೆ ಅರಬ್ಬೀ ಸಮುದ್ರದಲ್ಲಿ ಇವತ್ತು ಶೇಕಡ 3 ರಷ್ಟು ಉತ್ತಮಾಂಶದ ನೀರು ಇದೆ. ಬೆಂಗಳೂರಿನಲ್ಲಿ ಶೇಕಡ 3½ ಯಷ್ಟು ನೀರಿನ ಉತ್ತಮಾಂಶ ಇದೆ. ಈ ನೀರನ್ನು ಉಪಯೋಗಿಸಿಕೊಂಡು ಹಂತ ಹಂತವಾಗಿ ಸಪ್ಲೈ ಮಾಡುವುದರ ಮೂಲಕ ಕೃ ಗೆ ಮತ್ತು ಕುಡಿಯುವ ನೀರಿಗೆ ಹಾಗೂ ಜಲಸಮೃದ್ಧಿಗೆ ಬಳಸ ವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಹಣದ ಅವಶ್ಯಕತೆ ಇದೆ. ಅಂತರಾಷ್ಟ್ರಿಯ ಮಟ್ಟದಲ್ಲೂ ಕೂಡ ಈ ಬಗ್ಗೆ ಅವರ ಸಹಕಾರ ಪಡೆಯುವ ಸಾಧ್ಯತೆ ಇದೆ. ಇದು ಒಂದು ರಾಷ್ಟ್ರೀಯವಾದ ಮತ್ತು ಜನಾಂಗಿಕವಾದ ಸಮಸ್ಯೆ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಆದರೆ ಕರ್ನಾಟಕ ಇದರ ಹೆಚ್ಚಿನ ಅವಶ್ಯಕತೆಗಳನ್ನು ಹೊಂದಿದೆ. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ನಮ್ಮ ರಾಜ್ಯದ ಪಶ್ಚಿಮ ಘಟ್ಟಗಳು ಸಮುದ್ರಕ್ಕೆ ಚಾಚಿರುವುದರಿಂದ ಹೆಚ್ಚುವರಿ ನೀರನ್ನು ಪಡೆಯುವುದರ ಮೂಲಕ ನಮ್ಮ ತುಂಗಭದ್ರಾ, ಶರಾವತಿ ಯೋಜನೆಗಳಿಗೆ ಕೂಡ ನೀರನ್ನು ಒದಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಜಲಮೂಲಗಳನ್ನು ಪಡೆದರೆ ಇನ್ನು ಮುಂದ ಬರಬಹುದಾದ ನೀರಿನ ಸಮಸ್ಯೆಗಳನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಆಮೇಲೆ ನಮ್ಮ ಕೃಷಿಗೆ ಕೂಡ ಇನ್ನೂ ಹೆಚ್ಚಿನ ಜಲವನ್ನು ಬಳಸುವ ಅವಶ್ಯಕತೆ ಇದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ೪೫ ಲಕ್ಷ ಎಕರೆ ಭೂಮಿಗೆ ನೀರು ಬಳಸಬಹುದೆಂದು ಕಾಣುತ್ತದೆ. ಎಲ್ಲಾ ಜಲಮೂಲಗಳನ್ನು ಅದು ತುಂಗಭದ್ರ ಯೋಜನೆಯಿರಲಿ, ಅಥವಾ ಕೃಷ್ಣಾ ಯೋಜನೆಯಿರಲಿ ಕೆ. ಆರ , ಸಾಗರದ್ದು ಇರಲಿ ಹಾಗೂ ಇನ್ನೂ ದೊಡ್ಡ ದೊಡ್ಡ ಯೋಜನೆಗಳಾದ ಆಲಮಟ್ಟಿ, ನಾರಾಯಣಪುರ, ಹೇಮಾವತಿ, ಹಾರಂಗಿ ಇವೆಲ್ಲವನ್ನೂ ಉಪಯೋಗಿಸಿದರೆ ಕೂಡ ಬಹುಷಃ ನಮ್ಮ ರಾಜ್ಯದ ಅರ್ಧದಷ್ಟು ಭೂಮಿಗೆ ನೀರು ಸಿಕ್ಕಬಹುದು. ಉಳಿದ ಅರ್ಧದಷ್ಟು ಭೂಮಿಗೆ ನಾವು ಜಲದ ಕೊರತೆಯನ್ನು ಅನುಭವಿಸ ಬೇಕಾಗುತ್ತದೆ.

೬-೦೦ ಪಿ. ಎಂ.

(MR. SPEAKER in the Chair)

ಮಾನ್ಯ ಅಧ್ಯಕ್ಷರೆ, ಸಮುದ್ರದ ನೀರನ್ನು ಬಳಸಲಿಕ್ಕೆ ಸಾಧ್ಯವಾಗುತ್ತದೆ. ಸಮುದ್ರದಲ್ಲಿ ೨೪ ಪರ್ಸೆಂಟ್ ಉಪ್ಪು ಇರುವುದನ್ನು ಹಂತ ಹಂತವಾಗಿ ಸ್ವಚ್ಛ ಮಾಡುವುದರ ಮುಖಾಂತರ ಕೃಷಿ ಬೇಸಾಯಕ್ಕೆ ಉಪಯೋಗಕ್ಕೆ ಬರುವ ರೀತಿ ಮಾಡಿದರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ವ್ಯಾಪಕವಾಗಿ ರಾಷ್ಟ್ರೀಯಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿಯಾದರೂ ಸ್ವಚ್ಛ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಈ ರೀತಿ ನೀರನ್ನು ಸ್ವಚ್ಛಗೊಳಿಸಿ ಕೃಷಿಗೆ ಹೆಚ್ಚು ನೀರನ್ನು ಬಳಸಿದರೆ ನಮ್ಮ ಗ್ರಾಮೀಣ ಜನತೆಯ ನಿರುದ್ಯೋಗ ಬಗೆಹರಿಸಲಿಕ್ಕ ಸಾಧ್ಯವಾಗುತ್ತದೆ. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಮುಂದುವರಿಸಿದರೆ ಸುಮಾರು ಮೂರುವರೆ ಸಾವಿರ ಮಂದಿಗೆ ಕೆಲಸ ಕೊಡಲಿಕ್ಕೆ ಸಾಧ್ಯ. ಅದೇ ರೀತಿ ಮಧ್ಯಮವರ್ಗದ ಕೈಗಾರಿಕೆಗಳು ಅಂದರೆ ಸಕ್ಕರೆ ಕಾರ್ಖಾನೆ. ಬಟ್ಟೆ ಕಾರ್ಖಾನೆಗಳಿಗೆ ಒಂದು ಕೋಟಿ ರೂಪಾಯಿ ಬಂಡವಾಳ ಹಾಕಿದರೆ ಸುಮಾರು ಒಂದೂ ಸಾವಿರ ಮಂದಿಗೆ ಉದ್ಯೋಗಸಿಕ್ಕುತ್ತದೆ. ಭಾರಿ ಕೈಗಾರಿಕೆ ಅಂದರೆ ಉಕ್ಕಿನ ಕಾರ್ಖಾನೆ. ರೈಲ್ವೆ ಕೋಚ್ ಇಂತಹ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಪ್ರಾರಂಭಮಾಡುವುದಕ್ಕೆ ಒಂದು ಕೋಟಿ ರೂಪಾಯಿ ಹಾಕಿದರೆ ಅದರಿಂದ ಹೆಚ್ಚಿನ ಜನರಿಗೆ ಉಧ್ಯೋಗಾವಕಾಶ ಸಿಕ್ಕಲಾರದು. ಗ್ರಾಮೀಣ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕಾದರೆ ಜಲಸಂಪನ್ಮೂಲಗಳನ್ನು ನಾವು ಬೆಳಸಿಕೊಂಡರೆ ಇಂದು ಅಥವಾ ನಾಳೆ ಈ ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಇದೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಯೋಜನೆಗೆ ಎಂಟುವರೆ ಲಕ್ಷರೂಪಾಯಿಯ ಒಂದು ಎಸ್ಟಿಮೇಟ್ ತಯಾರು ಮಾಡಿದ್ದರು. ಅದರ ಅಂದಾಜು ಪತ್ರ ಯಾವುದೋ ಇಂಜನೀಯರ್ ಆಫೀಸ್‌ನಲ್ಲಿ ಇರಬಹುದು. ಇದು ೫೦ ಮೈಲಿ ಜಲ ಸಾರಿಗೆ ಅಂದಾಜು ಇದೆ ಇದನ್ನು ಮಾಡಿಸಿದರೆ ಈ ನೀರಿನ ಯೋಜನೆಯಿಂದ ದೇಶದ ಉತ್ಪಾದನೆ ಹೆಚ್ಚಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಸಂಪಾದನೆಯು ಆಗುತ್ತದೆ ಇದು ಒಂದು ನಮ್ಮ ಜಿಲ್ಲೆಯಲ್ಲಿ ಸಾಬೀತಾದ ವಿಚಾರ.

ಶ್ರೀ ಕೆ. ಎಂ. ತಮ್ಮಯ್ಯ.— ಮಾನ್ಯ ಅಧ್ಯಕ್ಷರೆ, ಇವತ್ತಿನ ಸಭೆಯು ಎಲ್ಲಿಯವರೆಗೆ ಮುಂದುವರಿಯುತ್ತದೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. ಮಾನ್ಯ ಸಭಾಪತಿಗಳೇ, ಇವತ್ತು ನಾವು ೭ ಗಂಟೆಯವರೆಗೆ ಕೂಡಬೇಕಾಗುತ್ತದೆ. ಕಾರಣವಾದರೂ ಇಷ್ಟೆ ಇನ್ನು ಅನೇಕ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಈ ಕಡೆಯವರು ಆ ಕಡೆಯವರು ಆದ್ದಾರೆ ಆದ್ದರಿಂದ ಎಲ್ಲರಿಗೂ ಅವಕಾಶಮಾಡಿಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ಸರ್ಕಾರದ ಕಡೆಯಿಂದ ಏನು ಹೇಳುತ್ತಾರೆಂದು ನೋಡೋಣ.

ಶ್ರೀ ಕೆ. ಎಚ್. ರಂಗನಾಥ್.— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋದಪಕ್ಷದ ನಾಯಕರು ಹೇಳಿದಂತೆ ಇವತ್ತು ಸ್ವಲ್ಪ ಹೆಚ್ಚು ಹೊತ್ತು ಕೂಡಬೇಕಾಗುತ್ತದೆ ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲ.

ಒಬ್ಬ ಸದಸ್ಯರು.— ಮಾನ್ಯ ಅಧ್ಯಕ್ಷರೆ, ನಮಗೆ ಪಾರ್ಟಿ ಮೀಟಿಂಗ್ ಇದೆ.

ಅಧ್ಯಕ್ಷರು.— ಮಾನ್ಯ ರಂಗನಾಥ್‌ರವರು ಸರ್ಕಾರದ ಪರವಾಗಿ ಹಾಗೂ ಮಾನ್ಯ ಬೊಮ್ಮಾಯಿಯವರು ವಿರೋಧಪಕ್ಷದ ಕಡೆಯಿಂದ ಒಪ್ಪಿರುವುದರಿಂದ ಇವತ್ತು ೭ ಗಂಟೆಯವೆರೆಗೆ ಈ ದಿನ ಸಭೆಯನ್ನು ನಡೆಸೋಣ.

ಶ್ರೀ ಆನಂದ ಕುಂದ ಹೆಗ್ಡೆ.— ಇಂದು ನಮ್ಮ ಹುಬ್ಬಿಯಲ್ಲಿ ಬೀಜ ಉತ್ಪಾದನಾ ಕೇಂದ್ರವನ್ನು ತಂದಿದ್ದಾರೆ. ಇಲ್ಲಿ ಹೊಸ ತಳಿಗಳ ಬಗ್ಗೆ ಸಂಸ್ಕರಣ ನಡೆಸಿ ಒಳ್ಳೆಯ ಬೀಜಗಳನ್ನು ಯಶಸ್ವಿಯಾಗಿ ಪ್ರಯೋಗಮಾಡಿ ರೈತರಿಗೆ ಇದರಿಂದ ಅನುಕೂಲ ಆಗುವ ರೀತಿ ಮಾಡಿದ್ದಾರೆ. ಆದ್ದರಿಂದ ನಮ್ಮ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡದಲ್ಲಿ ಈ ತಳಿಗಳ ಜೊತೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ೧೪೦- ೧೫೦-೧೬೦ ದಿವಸಗಳಲ್ಲಿ ಬೆಳೆಯುವ ತಳಿಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ. ಪ್ರಾಮುಖ್ಯವಾಗಿ ನಮ್ಮ ಜಿಲ್ಲೆಮಟ್ಟಿಗೆ ಈ ಒಂದು ಸಂಸ್ಕರಣ ಕೇಂದ್ರ ಇದೆ. ಕೇರಳದಲ್ಲಿ ಉಪ್ಪುನೀರಿನಲ್ಲಿ ನಡೆದ ಒಂದು ಯಶಸ್ವಿ ಪ್ರಯೋಗ ನಮ್ಮ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕ್ಷೇತ್ರಕ್ಕೆ ಹೆಚ್ಚು ಪರಿಣಾಮ ಆಗಬಹುದು. ಡಿಮೆ ಅವದಿಯಲ್ಲಿ ಹೆಚ್ಚು ಬೆಳೆ ಬೆಳೆಸಬಹುದು. ಆದ್ದರಿಂದ ಇದರ ಅವಶ್ಯ ತನಿಖೆಯಾಗಬೇಕು. ಎಂದು ಹೇಳಿ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್ (ಉತ್ತರಹಳ್ಳಿ).—ಮಾನ್ಯ ಅಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣವನು ಸೂಕ್ಷ್ಮವಾಗಿ ಪರಿಶೀಲಿಸಿದ್ದೇನೆ. ಆದರೆ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಯಾವ ರಾಜ್ಯದಲ್ಲಿ ೧೦೦ಕ್ಕೆ ೭೫ ಭಾಗದ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ ಆ ಭಾಗದ ಜನರಿಗೆ ಅನುಕೂಲ ಮಾಡಲಿಕೆ ಸರ್ಕಾರ ಪ್ರಯತ್ನಪಟ್ಟಿಲ್ಲ ಎಂದು ಹೇಳಿದರೆ ತಪ್ಪಾಗಲುರದು. ಸುಮಾರು ೨೬,೮೨೬ ಹಳ್ಳಿಗಳು ನಮ್ಮ ರಾಜ್ಯದಲ್ಲಿ ಇವೆ. ನೂರಕ್ಕೆ ೭೫ ಜನ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ಒಂದು ದುರ್ದೈವದ ಸಂಗತಿ ಎಂದರೆ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿಗೆ ಪಟ್ಟಣದ ಜನರಿಗೆ ಅವರ ಸಮಸ್ಯೆಗಳಿಗೆ ಹೆಚ್ಚಿನ ಗಮನ ಕೊಟ್ಟಿದ್ದಾರೆಂದರೆ ತಪ್ಪಾಗಲಾರದು. ಇದು ಹೇಗೆ ಇದೆ ಎಂದರೆ ದೇವರ ಮುಂದೆ ನೇವೆದ್ಯ ಇದ್ದಂತೆ ಕೆಲವು ಸ್ಕೀಮುಗಳನ್ನು ಸಭೆಯಮುಂದೆ ಇಟ್ಟಿದ್ದಾರೆ. ಇದು ದುರ್ದೈವವೆಂದು ಹೇಳಿದರೆ ತಪ್ಪಾಗಲಾರದು ಎಂದು ತಿಳಿಯುತ್ತೇನೆ. ಇನ್ನು ಅವರ ಭಾಷಣದ ಎರಡನೇ ಪೇಜಿನಲ್ಲಿ ರಾಜ್ಯಪಾಲರ ಬಾಯಿಂದ ಸರ್ಕಾರದವರು ಹೇಳಿಸಿದ್ದಾರೆ ರೀಸನಬಲ್ ಸಪೋರ್ಟಿಂಗ್ ಪ್ರೈಸ್ ವ್ಯವಸಾಯಗಾರರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ನಿಜವಾಗಿಯೂ ಈ ಮಾತಿನಲ್ಲಿ ಎಷ್ಟು ಸತ್ಯಕ್ಕೆ ದೂರವಾದ ಅಂಶ ಇದೆ ಎಂದು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ರೈತ ಬಹಳ ಕಷ್ಟಪಟ್ಟು ಬೆಳೆಯನ್ನು ಬೆಳೆಯುತ್ತಿದ್ದಾನೆ. ಆದರೆ ಇವತ್ತಿನದಿವಸ ಅವನ ಸ್ಥಿತಿ ಏನಾಗಿದೆ ? ಎಲ್ಲಾ ಪದಾರ್ಥಗಳು ತಾನು ಏನು ಬೆಳೆಯುತ್ತಾನೆ, ಭತ್ತವಾಗಲೀ. ರಾಗಿಯಾಗಲೀ, ಜೋಳವಾಗಲೀ, ಕಬ್ಬು ಆಗಲೀ, ಬೆಲೆಗಳು ಇಳಿಯುತ್ತಿವೆ. ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದರೆ ತಪ್ಪಾಗಲಾರದು. ಉದಾಹರಣೆಗೆ ಹೇಳುವುದಾದರೆ, ಭತ್ತದ ಬೆಲೆ ಏನು ಇದೆ ಅಂದರೆ ಅದರ ಕಾಸ್ಟ್ ಪ್ರೈಸ್ ಎಷ್ಟಾಗುತ್ತದೆ ಏನ್ನುವುದನ್ನು ಲೆಕ್ಕ ಹಾಕಿದರೆ ಸರ್ಕಾರಕೆ ಅದು ಮನದಟ್ಟಾಗಿ ತಿಳಿಯುತ್ತದೆ. ಇಲ್ಲಿ ವ್ಯವಸಾಯ ಮಂತ್ರಿಗಳು ಉಪಸ್ಥಿತರಿದ್ದಾರೆ, ಅವರು ಸ್ವತಃ ವ್ಯವಸಾಯಗಾರರು. ಆದ್ದರಿಂದ ಈ ವಿಚಾರ ಅವರಿಗೆ

ಚೆನ್ನಾಗಿ ಗೊತ್ತಿದೆ ಒಂದು ಕ್ವಿಂಟಾಲ್‌ಗೆ ೯೧–೨೫ ಪೈಸೆ ಭತ್ತದ ಕಾಸ್ಟ್ ಪ್ರೈಸ್ ಆಗುತ್ತದೆ. ಆದರೆ ಸರ್ಕಾರದವರು ಕೊಟ್ಟಿರುವ ಲೆವಿ ಪ್ರೈಸ್ ಎಷ್ಟು ? ಅದು ಒಳ್ಳೆಯ ಭತ್ತವಾದರೆ, ೮೧ ರಿಂದ **೮೨** ರೂಪಾಯಿಗಳು, ಎರಡನೆಯ ಗ್ರೇಡ್ ಭತ್ತವಾದರೆ, ೭೪–೭೫ ರೂಪಾಯಿಗಳಾಗುತ್ತದೆ. ಇದು ನಿಜ ವಾಗಿಯೂ ರೈತನಿಗೆ ಕೊಡತಕ್ಕ ಸಪೋರ್ಟ್ ಪ್ರೈಸೇ ಎನ್ನತಕ್ಕದ್ದನ್ನು ತಾವು ತೀರ್ಮಾನ ಮಾಡಬೇಕಾಗು ತ್ತದೆ. ಅದೇರೀತಿಯಲ್ಲಿ ರಾಗಿ–ಇರಿಗೇಟೆಡ್, ೯೯–೧೨ ಪೈಸೆ ಬೆಳೆಯುವುದಕ್ಕೆ ಖರ್ಚಾಗುತ್ತದೆ. ಅನ್ ಇರಿಗೇಟೆಡ್ ಆದರೆ ಒಂದು ಕ್ವಿಂಟಾಲ್‌ಗೆ ೧೦೬–೩೭ ಪೈಸೆ ಬೇಕಾಗುತ್ತದೆ. ಇವತ್ತಿನದಿವಸ ಸರ್ಕಾರದವರು ಕೊಡತಕ್ಕ ಕಾಸ್ಟ್ ಪ್ರೈಸ್ ಏನು ಇದೆ ಆ ವಿಚಾರದಲ್ಲಿ ಸರ್ಕಾರದವರ ನೀತಿ ಏನು ಎನ್ನತಕ್ಕದ್ದು ಕೂಲಂಕುಷವಾಗಿ ತಿಳಿಸಿಲ್ಲ. ಇದರ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗು ವುದಿಲ್ಲ. ವ್ಯವಸಾಯಕ್ಕೆ ಸಂಬಂಧಪಟ್ಟ ಡಿಮ್ಯಾಂಡ್ ಬಂದಾಗ ಅದರ ವಿಚಾರದಲ್ಲಿ ಮಾತನಾಡು ವುದಕ್ಕೆ ಇಷ್ಟಪಡುತ್ತೇನೆ. ಹಳ್ಳಿಯ ರೈತರ ಜನಜೀವನ ಕಣ್ಣೀರಿನ ಕಥೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ರಾಜ್ಯಪಾಲರ ಭಾಷಣದಲ್ಲಿ, ಇದರ ಬಗ್ಗೆ ಅಂಕಿಅಂಶಗಳಿಂದ ಪರಿಶೀಲನೆ ಅವರು ಹೇಳುತ್ತಾರೆ.

ಮೆಡಿಕಲ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬೆಡ್ ರೇಷಿಯೋ ಏನು ಇದೆ ಯೆಂದರೆ, ೧ : ೯೦೦ ಎಂದು ನಾನು ಹೇಳುತ್ತೇನೆ. ಅದೇ ರೀತಿಯಲ್ಲಿ, ಡಾಕ್ಟರುಗಳು ಮತ್ತು ಪರ್ಸನ್ಸ್ ರೇಷಿಯೋ ೧ : ೭೫೦೦ ಪಟ್ಟಣಗಳಲ್ಲಿರತಕ್ಕ ಎಲ್ಲಾ ಬೆಡ್‌ಗಳ ಲೆಕ್ಕ ತೆಗೆದುಕೊಂಡು, ಪಟ್ಟಣ ಗಳಲ್ಲಿರತಕ್ಕ ಎಲ್ಲಾ ಡಾಕ್ಟರುಗಳ ಲೆಕ್ಕ ತೆಗೆದುಕೊಂಡಾಗ, ಹಳ್ಳಿಗಳಲ್ಲಿ ಎಷ್ಟು ಸಾವಿರ ಜನಕ್ಕೆ ಒಬ್ಬ ಡಾಕ್ಟರು ಇದ್ದಾರೆ ಎನ್ನುವುದನ್ನು ತಿಳಿಸಬೇಕು ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಹಳ್ಳಿಗಳಲ್ಲಿ ಸಾವಿರಾರು, ಲಕ್ಷಾಂತರ ಜನಕ್ಕೆ ಒಬ್ಬ ಡಾಕ್ಟರು ಇಲ್ಲ. ನನ್ನ ಹಳ್ಳಿಯಲ್ಲಿ ನಾನು ಡಾಕ್ಟರನ್ನು ನೋಡಬೇಕಾದರೆ ಸುಮಾರು ೫ ಮೈಲಿಗಳ ದೂರ ಹೋಗಬೇಕಾಗುತ್ತದೆ. ಅದೂ ಕೂಡ ಸರಿಯಾದ ರೋಡುಗಳು ಇಲ್ಲದೆ, ಬಸ್ ಸೌಕರ್ಯ ಇಲ್ಲದೆ, ಎತ್ತಿನ ಗಾಡಿಯಲ್ಲಿ ಹೋಗಬೇಕಾಗಿರು ತ್ತದೆ. ಇದು ನಮ್ಮ ರಾಜ್ಯದ ದುಸ್ಥಿತಿ ಎಂದು ಹೇಳಿದರೆ ಅದು ತಪ್ಪಾಗಲಾರದು. ಅದಕ್ಕೋಸ್ಕರ ನಾನು ಹೇಳುತ್ತೇನೆ, ನಮ್ಮ ರಾಜ್ಯಪಾಲರ ಭಾಷಣದಲ್ಲಿ ಏನು ಇದೆ ಅದು ಪಟ್ಟಣಗಳಲ್ಲಿರತಕ್ಕ ಜನರ ಅನುಕೂಲಕ್ಕಾಗಿ, ಅವರ ಉದ್ಧಾರಕ್ಕಾಗಿ ಇದೆ, ಎಂದು ಹೇಳಿದರೆ ಅದು ಏನೂ ತಪ್ಪಾಗಲಾರದು, ದುರ್ದೈವದಿಂದ ಹಳ್ಳಿಗಳಲ್ಲಿ ವಾಸ ಮಾಡತಕ್ಕ ಜನರು ಮುಗ್ಧರು, ಅವರಿಗೆ ಏನು ಸೌಲಭ್ಯಗಳು ಆಗಬೇಕು. ಎಂದು ಕೇಳತಕ್ಕಂಥ ಶಕ್ತಿಯನ್ನೂ ಸಹ ಅವರು ಪಡೆದಿಲ್ಲ. ಅವರ ಪ್ರತಿನಿಧಿಗಳಾದ ನಾವೂ ಸಹ ಅವರ ಹಿತವನ್ನು ಎಷ್ಟರಮಟ್ಟಿಗೆ, ಅವರ ಕಷ್ಟವನ್ನು ಎಷ್ಟರಮಟ್ಟಿಗೆ ಈ ಸಭೆಯ ಮುಂದೆ ರಾಷ್ಟ್ರದ ಮುಂದೆ ಇಡುವುದರಲ್ಲಿ, ನನ್ನನ್ನೂ ಒಳಗೊಂಡು ವಿಫಲರಾಗಿದ್ದೇವೆ ಎಂದು ಹೇಳುತ್ತೇನೆ. ರಾಜ್ಯಪಾ ಲರು ಅವರ ಭಾಷಣದ ಮೊದಲನೆಯ ಪುಟದಕೊನೆಯಲ್ಲಿ, ತಮ್ಮ ಕ್ಷೇತ್ರದ ಮತದಾರರಿಗೆ ತಾವು ಕೊಟ್ಟಿ ರುವ ಆಶ್ವಾಸನೆಗಳನ್ನು ತಾವು ಸ್ಮರಣೆಯಲ್ಲಿಟ್ಟುಕೊಂಡು ಅವುಗಳ ಪೂರೈಕೆಗೆ ಸತತವಾಗಿ ಯತ್ನಿಸುವಿ ರೆಂದು ಈ ಸುಸಂದರ್ಭದಲ್ಲಿ ತಮ್ಮನ್ನು ಕೋರುತ್ತೇನೆ, ಎಂದು ಹೇಳಿದ್ದಾರೆ. ಇದನ್ನು ನಾನು ಸ್ವಾಗತಿಸು ತ್ತೇನೆ. ಇವತ್ತಿನ ದಿವಸ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾದಲ್ಲಿ ನಾವು ವಿಫಲರಾದರೆ ನಿಜ ವಾಗಿಯೂ ದೇಶವುಂ..ೆ ಮಹಾ ಕಷ್ಟವನ್ನು ಅನುಭವಿ ಸಬೇಕಾಗುತ್ತದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ ಹಾಗೂ ನಮ್ಮ ಎಲ್ಲಾ ಸದಸ್ಯರಿಗೂ ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

ಇನ್ನು ವಿಧ್ಯಾಭ್ಯಾಸದ ವಿಚಾರದಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಇವತ್ತಿನದಿವಸ ನಮ್ಮ ರಾಷ್ಟ್ರದಲ್ಲಿ ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸದ ಕ್ರಮ ಏನು ಇದೆ, ಹಿಂದೆ ಯಾವ ವಿದ್ಯಾಭ್ಯಾಸದ ಕ್ರಮ ಇತ್ತು, ಅದನ್ನೇ ನಾವು ರೂಢಿಸಿಕೊಂಡು ಬರುತ್ತಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ನಮ್ಮ ರಾಷ್ಟ್ರವನ್ನು ಅಭಿವೃದ್ಧಿ ಮಾಡುವುದಕ್ಕೆ ಒಳ್ಳೆಯ ವಿದ್ಯಾಭ್ಯಾಸ ಕ್ರಮವನ್ನು ನಾವು ಜಾರಿಗೆ ತರಬೇಕಾಗಿದೆ. ದುರ್ದೈವದ ಸಂಗತಿ, ಯಾವ ರಾಷ್ಟ್ರವೇ ಆಗಲಿ ಹೊಸ ಸರ್ಕಾರ ಬಂದಾಗ ಮೊಟ್ಟಮೊದಲನೆಯದಾಗಿ ಅವರು ಮಾಡತಕ್ಕದ್ದು ವಿದ್ಯಾಭ್ಯಾಸದ ಕ್ರಮದ ಬದಲಾವಣೆ. ಉದಾಹರ ಣೆಗೆ ರಷ್ಯಾದೇಶವನ್ನು ತೆಗೆದುಕೊಳ್ಳಿ, ೧೯೧೭ ರಲ್ಲಿ ಅಲ್ಲಿ ರೆವಲ್ಯೂಷನ್ ಆದಾಗ ಅವರು ತಕ್ಷಣ ಮಾಡಿದ್ದು ವಿದ್ಯಾಭ್ಯಾಸದ ಕ್ರಮದ ಬದಲಾವಣೆ. ಅಮೇರಿಕಾ ದೇಶದಲ್ಲಿಯೂ ಸಹ ಅವರು ಸ್ವಾತಂತ್ರ್ಯದ ಪೂರ್ವದಲ್ಲಿ: ಇದ್ದಂಥ ವಿದ್ಯಾಭ್ಯಾಸದ ಕ್ರಮವನ್ನು ನಂತರ ಬದಲಾವಣೆ ಮಾಡಿದರು. ಅದೇ ರೀತಿ ಯಲ್ಲಿಚೈನಾ ದೇಶದಲ್ಲಿಯೂ ಸಹ ಹೊಸ ಸರ್ಕಾರ ಬಂದ ತಕ್ಷಣ ವಿದ್ಯಾಭ್ಯಾಸದ ಕ್ರಮವನ್ನು

ಬದಲಾವಣೆ ಮಾಡಿದರು ಇಂಥಾ ಬದಲಾವಣೆ ಮಾಡಿದಂಥವಮಹಾನಾಯಕ ಚೈನಾದೇಶದ ಅಂದಿನ ಮುಖ್ಯಮಂತ್ರಿ. ತಮ್ಮ ಹಳ್ಳಿಗಾಡುಗಳಲ್ಲಿ ಜನಗೆರಿ, ಅವರಿಗೆ ಏನು ಕಷ್ಟ ಇದೆ, ಅವರನ್ನು ತಮ್ಮ ಕಷ್ಟದಿಂದ ಪಾರುಮಾಡಬೇಕುಎಂದು ಯೋಚಿಸಿದ ಮಹ ನಾಯಕ, ನಮ್ಮ ರಾಷ್ಟ್ರದ ಮಹಾತ್ಮಾಗಾಂಧಿಯವರನ್ನು ಬಿಟ್ಟರೆ, ಮಾವೋತ್ಸೆ ತುಂಗ್ ಅವರು. ಇವತ್ತು ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಕಲಿತಿರತಕ್ಕ ವ್ಯಕ್ತಿಯ ಮುಂದೆ ಹೋಗಿ ಕೈಗೆ ಭತ್ತವಾಗಲೀ, ರಾಗಿ ಯಾಗಲಿ, ಕೊಟ್ಟು ಇದು ಯಾವ ಧಾನ್ಯ ಎಂದು ಕೇಳಿದರೆ, ಅವರು ಹೇಳತಕ್ಕಂಥ ಶಕ್ತಿ ಇರು ವುದಿಲ್ಲ. ಇದು ನಮ್ಮ ದೇಶದ ವಿಧ್ಯಾಭ್ಯಾಸದ ಕ್ರಮ. ವ್ಯವಸಾಯವೇ ನಮ್ಮದೇಶದ ಮುಖ್ಯ ಕಸಬು, ನೂರಕ್ಕೆ ೭೫ ಜನರು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದು ವ್ಯವಸಾಯವೇ ಮುಖ್ಯ ಕೈಗಾರಿಕೆಯಾಗಿ ರುವಾಗ, ಇದಕ್ಕೆ ನಾವು ಪೂರ್ಣವಾದ ಅವಕಾಶ ಕೊಡಬೇಕಾಗಿರುವಾಗ ನಮ್ಮ ವಿದ್ಯಾಭ್ಯಾಸದ ಕ್ರಮ ಯಾವರೀತಿ ಇರಬೇಕು ಎನ್ನುತಕ್ಕದ್ದನ್ನು ನಾವು ಯೋಚನೆ ಮಾಡಬೇಕಾಗಿದೆ.

ಇನ್ನೊಂದು ಮಾತನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಹಾಗೂ ಟೀಚರ್ಸ್ ರೇಷಿಯೋ ಬಗೆ ಹೇಳಿದ್ದಾರೆ. ನಾನು ಈ ವಿಚಾರವನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಹಳ್ಳಿಗಳ ಕಡೆ ಇರತಕ್ಕ ಸ್ಕೂಲುಗಳಿಗೆ ಏನು ಸರ್ಕಾರದವರು ಕಟ್ಟಡ ಗಳನ್ನು ಕಟ್ಟಿದ್ದಾರೆ ಅವು ಎಷ್ಟರಮಟ್ಟಿಗೆ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ರೇಷಿಯೋದ ಪ್ರಕಾರ ಇವೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆಯೋ ಎಂದು ನಾನು ಮಾನ್ಯ ಮಂತ್ರಿ ಗಳನ್ನು ಕೇಳಬೇಕಾಗಿದೆ, ಮತ್ತು ನಾನು ಇದರ ಬಗ್ಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಇವತ್ತಿನದಿವಸ ನಮ್ಮಗೆ ವಿದ್ಯಾಭ್ಯಾಸ ಕಲಿಸತಕ್ಕ ಗುರುಗಳು ಇದ್ದಾರೆ, ಅವರ ವಿಚಾರದಲ್ಲಿ ಸರ್ಕಾರ ಎಷ್ಟರ ಮಟ್ಟಿಗೆ ಗಮನಕೊಟ್ಟಿದೆ, ಅವರು ಅವರ ಜೀವನವನ್ನು ಎಷ್ಟರಮಟ್ಟಿಗೆ ನಡೆಸಿಕೊಂಡು ಹೋಗುವುದಕ್ಕೆ ಗಮನ ಕೊಟ್ಟಿದೆ ಎಂದು ನೋಡಿದರೆ, ದುರ್ದೈವದ ಮಾತನ್ನು ಈ ಬಗ್ಗೆ ಹೇಳಬೇಕಾಗಿದೆ. ಮುಂದೆ ರಾಜ್ಯ ಪಾಲರು ತಮ್ಮ ಭಾಷಣದಲ್ಲಿ

> 'My Government has taken steps to vocationalise higher secondary education by introducing on a pilot basis terminal course in agriculture, banking commerce, para-medical education etc.,'

ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇವತ್ತು ಹಳ್ಳಿಗಾಡುಗಳಲ್ಲಿ ಒಂದು ಪರಿಸ್ಥಿತಿ ಉದಯ ವಾಗುತ್ತದೆ, ಏನೆಂದರೆ, ಅಲ್ಲಿ ಮರಗೆಲಸದವರು ಸಿಕ್ಕುತ್ತಿಲ್ಲ, ಬ್ಲಾಕ್‌ಸ್ಮಿತ್ಸ್ ಸಿಕ್ಕುತ್ತಿಲ್ಲ.

ಹಳ್ಳಿಗಳಲ್ಲಿ ಬಟ್ಟೆ ಹೊಲಿಯುವುದಕ್ಕೆ ಜನ ಸಿಕ್ಕುತ್ತಾ ಇಲ್ಲ, ಸಣ್ಣ ಸಣ್ಣ ಯಂತ್ರಗಳನ್ನು ರಿಪೇರಿ ಮಾಡುವುದಕ್ಕೆ ಜನ ಸಿಕ್ಕುತ್ತಾ ಇಲ್ಲ, ಹಳ್ಳಿಗಾಡುಗಳಲ್ಲಿ ಇತ್ತೀಚೆಗೆ ಯಾವ ನೀರಾವರಿ ಯೋಜನೆಗಳನ್ನು ಕೈಗೊಂಡು ವ್ಯವಸಾಯ ಮಾಡಲಾಗುತ್ತಿವೆ. ಈ ಯೋಜನೆಗೆ ಬೇಕಾದ ನಾನಾ ವಿಧವಾದ ಯಂತ್ರ ಗಳನ್ನು ವ್ಯವಸಾಯಕ್ಕಾಗಿ ಆಗ್ರೋ ಇಂಡಸ್ಟ್ರಿಸ್ ಕಾರ್ಪೊರೇಶನ್ ಮೂಲಕ ಕೊಡಲಾಗುತ್ತಿದೆ. ಈ ಯಂತ್ರಗಳು ಕೆಟ್ಟು ಹೋದರೆ, ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ಹಳ್ಳಿಗಳಲ್ಲಿ ಎಷ್ಟು ಮಟ್ಟಿಗೆ ಅನು ಕೂಲವನ್ನು ಕಲ್ಪಿಸಲಾಗಿದೆ ಎಂದು ನಾವು ನಮ್ಮನ್ನೇ ಪ್ರಶ್ನಿಸಿ ಕೊಳ್ಳಬೇಕಾಗಿದೆ. ಆದುದರಿಂದ, ವಕೇ ಷನಲ್ ಶಿಕ್ಷಣ ಕ್ರಮವನ್ನು ಆದಷ್ಟು ಜಾಗ್ರತೆ ತರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ

ಟ್ರಸ್ಟ್‌ಬೋರ್ಡ್‌ಗಳು, ಡೆವಲಪ್ಮೆಂಟ್ ಅಥಾರಿಟಿಗಳು ಏನೇನು ಕೆಲಸ ಮಾಡಿವೆ ಎನ್ನುವ ವಿವರಣೆ ಯನ್ನು ಇಲ್ಲಿ ಕೊಡಲಾಗಿದೆ. ಅದರ ಮುಂದಿನ ಘಟದಲ್ಲಿ ಭೂರಹಿತ ಕಾರ್ಮಿಕರಿಗೆ ಹಳ್ಳಿಗಳಲ್ಲಿ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ಎನ್ನುವ ಅಂಕಿ-ಅಂಶವನ್ನೂ ಕೊಡಲಾಗಿದೆ. ಹಳ್ಳಿಗಳಲ್ಲಿ ವಾಸ ಮಾಡುವ ಬಡ ಜನರಿಗೆ ನಿವೇಶನಗಳ ಕೊರತೆ ಎಷ್ಟಿದೆ, ಎನ್ನುವುದು ಈ ಅಂಕಿ ಅಂಶಗಳಿಂದಲೇ ವ್ಯಕ್ತ ವಾಗುತ್ತದೆ. ನಮ್ಮ ರಾಜ್ಯದಲ್ಲಿ ಲಕ್ಷಾಂತರ ಹಳ್ಳಿ ಜನರು ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗದೆ ಬಹಳ ಕಷ್ಟದೆಸೆಯಲ್ಲಿ ವಾಸ ಮಾಡುತ್ತಿದ್ದಾರೆ. ಈಗ ಪಟ್ಟಣ ಮತ್ತು ನಗರಗಳಲ್ಲಿ ಟ್ರಸ್ಟ್ ಬೋರ್ಡ್ ಮತ್ತು ಡೆವಲಪ್ಮೆಂಟ ಅಥಾರಿಟಿ ಎಂದು ಮಾಡಿದ್ದಾರೆ. ಅದೇ ರೀತಿ ಗ್ರಾಮೀಣ ಗೃಹನಿರ್ಮಾಣ ಮಂಡಲಿಗಳನ್ನೂ ರಚನೆ ಮಾಡಬೇಕು, ಮತ್ತು ಅದರ ಮೂಲಕ ಹಳ್ಳಿಗಾಡಿನ ಜನರ ವಾಸದ ಮನೆಯ ಸಮಸ್ಯೆಯನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು,

ಶ್ರೀ ಕೆ. ಎಚ್. ರಂಗನಾಥ್.— ಹದಿನಾಲ್ಕು ಜನ ಒಟ್ಟಿಗೆ ಮನೆಗಳನ್ನು ಕಟ್ಟುವುದಾದರೆ, ಪ್ರತಿ ಮನೆಗೆ ಐದು ಸಾವಿರ ರೂಪಾಯಿ ಸಾಲದ ವ್ಯವಸ್ಥೆ ಮಾಡುವ ಯೋಜನೆಯೊಂದು ರಾಜ್ಯ ಗೃಹ ನಿರ್ಮಾಣ ಮಂಡಲಿಯಲ್ಲಿದೆ.

ಶ್ರೀ ಎಂ. ಸಿ. ಬಸಪ್ಪ.— ಆ ಯೋಜನೆ ಯೋಜನೆಯಾಗಿ ಉಳಿದಿದೆಯೇ ಹೊರತು ಕಾರ್ಯ ರೂಪಕ್ಕೆ ಬಂದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ? ಬಂದಿಲ್ಲದಿದ್ದರೆ ಮಾಹಿತಿಯನ್ನು ತರಿಸಿಕೊಳ್ಳಿ.

ಶ್ರೀ ಕೆ. ಎಚ್. ರಂಗನಾಥ್.— ಮನೆಗಳನ್ನು ಕಟ್ಟಲು ಸಾಲ ತೆಗೆದುಕೊಂಡು, ಆ ಸಾಲವನ್ನು ಮರುಪಾವತಿ ಮಾಡದೆ, ಕಾಲಾವಕಾಶ ಕೊಡಿ, ಕಾಲಾವಕಾಶ ಕೊಡಿ ಎಂದು ಮುಂದೂಡುತ್ತಾ ಇರುವುದರ ದೆಸೆಯಿಂದಾಗಿ ಗೃಹನಿರ್ಮಾಣ ಮಂಡಲಿಗೆ ಇಂದು ಹಣ ಸಂದಾಯವಾಗುತ್ತಿಲ್ಲ. ಕೊಟ್ಟಿರುವ ಹಣ ವಾಪಸ್ಸು ಬರದೆ ಅವರು ಪುನ: ಸಾಲ ಹೇಗೆ ಮಂಜೂರು ಮಾಡುತ್ತಾರೆ? ಹಳ್ಳಿಗಾಡುಗಳಲ್ಲಿ ಇಂಥಾ ಪರಿಸ್ಥಿತಿ ಬಂದಿದೆ.

ಶ್ರೀ ಎಂ. ವಿ. ರಾಜಶೇಖರನ್.— ಈ ಯೋಜನೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಮತ್ತು ಇದು ಅಷ್ಟು ಪರಿಣಾಮಕಾರಿಯಾಗಿಯೂ ಇರುವುದಿಲ್ಲ. ಹಳ್ಳಿಗಾಡಿನ ಜನರ ವಸತಿ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕಾಗಿ ಗ್ರಾಮಾಂತರ ಗೃಹನಿರ್ಮಾಣ ಮಂಡಲಿಗಳನ್ನು ಸ್ಥಾಪನೆ ಮಾಡಿ ಏನೂ ತೊಂದರೆಯಾಗುವುದಿಲ್ಲ. ಆ ರೀತಿ ಮಾಡಿದ್ದಾದರೆ, ವಿಶ್ವ ಬ್ಯಾಂಕಿನಿಂದ ಧನ ಸಹಾಯವನ್ನು ಪಡೆಯಬಹುದು. ಬೇರೆ ದೇಶಗಳಲ್ಲಿ ಈ ರೀತಿ ಈಗಾಗಲೇ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ, ವಿವರಗಳನ್ನು ಬೇಕಾದರೆ ಒದಗಿಸುವುದಕ್ಕೆ ನಾನು ಸಿದ್ಧನಿದ್ದೇನೆ.

ನೀರಾವರಿ ವಿಚಾರವಾಗಿ ಬಹಳ ಚೆನ್ನಾಗಿ ಭಾಷಣದಲ್ಲಿ ಹೇಳಲಾಗಿದೆ. ಆದರೆ ವಾಸ್ತವವಾಗಿ ನಮ್ಮ ರಾಜ್ಯ ಇಡೀ ಭಾರತ ದೇಶದಲ್ಲೇ ನೀರಾವರಿಯಲ್ಲಿ ಬಹಳ ಹಿಂದುಳಿದ ರಾಜ್ಯವೆಂದರೆ ತಪ್ಪಾಗಲಾರದು. ಪಂಜಾಬಿನಲ್ಲಿ ಪ್ರತಿ ಶತ ಎಪ್ಪತ್ತೈದರಷ್ಟು ಭಾಗ ನೀರಾವರಿಯಾಗಿದೆ. ತಮಿಳುನಾಡಿನಲ್ಲಿ ನೀರಾವರಿಯಾಗುವ ಜಮೀನೆಷ್ಟು? ನಮ್ಮ ರಾಜ್ಯದಲ್ಲಿ ಇರಿಗೇಷನ್ ಪೊಟೆನ್‌ಸಿಯಲ್‌ನ್ನು ಸರಿಯಾಗಿ ಯೂಟಿಲೈಸ್ ಮಾಡಿಕೊಳ್ಳುತ್ತಿಲ್ಲ. ಇದು ದುರ್ದೈವದ ಸಂಗತಿ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ನೀರಿದೆ, ಆದರೆ ಅದು ನಮ್ಮ ರಾಜ್ಯದಲ್ಲಿ ಉಪಯೋಗವಾಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕಬಿನಿ ಯೋಜನೆಯನ್ನು ಕಟ್ಟಿದರು. ಇಂದು ಅದರ ನೀರನ್ನು ತಮಿಳುನಾಡಿಗೆ ಕೊಡುತ್ತಿದ್ದಾರೆ. ಇದರ ಕಡೆಗೆ ಸರ್ಕಾರ ಎಚ್ಚರಿಕೆ ವಹಿಸಿ ಕೂಡಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ತಿಳಿಯುತ್ತೇನೆ.

ಇನ್ನು ಮಂಚನ ಬೆಲೆ ಯೋಜನೆ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬೇಕಾಗಿದೆ. ಕೇಂದ್ರ ಸರ್ಕಾರದ ನೀರಾವರಿ ಸಚಿವರು ಬಂದು ಯೋಜನೆಯನ್ನು ಪರಿಶೀಲನೆ ಮಾಡಿ ಸೆಂಟ್ರಲ್ ಇರಿಗೇಷನ್ ಬೋರ್ಡಿನಿಂದ ಕ್ಲಿಯರೆನ್ಸ್ ಕೊಟ್ಟು, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ಆ ಯೋಜನೆ ಮಂಜೂರಾಗಿತ್ತು. ಈ ಯೋಜನೆಗೆ ಕೇಂದ್ರದವರು ಹಣ ನೀಡುವರೆಂದು ಹೇಳಲಾಗಿತ್ತು. ಆದರೆ, ಆಗಲೇ ಆರೇಳು ವರ್ಷಗಳಾದರೂ ಇನ್ನೂ ಈ ಯೋಜನೆ ಆಗಿಲ್ಲ. ಅಂದಿಗೆ ಈ ಯೋಜನೆಯ ಪೂರ್ತಿ ಅಂದಾಜು ವೆಚ್ಚ ಸುಮಾರು ನಾಲ್ಕು ಕೋಟಿ ರೂಪಾಯಿಗಳದಾಗಿತ್ತು, ಆದರೆ, ಇಂದು ಅದು ಹನ್ನೊಂದು ಕೋಟಿ ರೂಪಾಯಿಗಳಾಗುತ್ತದೆ ಎಂದು ತಿಳಿದುಬಂದಿದೆ. ಇದಕ್ಕೆ ಯಾರು ಜವಾಬ್ದಾರರು? ಯೋಜನೆಯನ್ನು ಪ್ರಾರಂಭ ಮಾಡುವುದರಲ್ಲಿ ನಿಧಾನ ಮಾಡಿದ್ದರ ದೆಸೆಯಿಂದಾಗಿ ಇಂದು ಹೆಚ್ಚಾದ ಹಣವನ್ನು ಹಳ್ಳಿಯಲ್ಲಿರುವ ಬಡ ರೈತ ತೆರಿಗೆಯ ಮೂಲಕ ಕೊಡಬೇಕಾಗುತ್ತದೆ. ಆದುದರಿಂದ, ಆದಷ್ಟು ಬೇಗ ಮಂಚನ ಬೆಲೆ ಯೋಜನೆಯನ್ನು ಮುಗಿಸಬೇಕೆಂದು ಪ್ರಾರ್ಥನೆ. ಕನಕಪುರದ ಬಳಿ ಇರುವ ಹಾರುಬೆಲೆ ಯೋಜನೆಗೆ ಈ ಸರ್ಕಾರ ಅಸ್ತಿಭಾರ ಹಾಕಿದಾಗ ನಮಗೆ ಬಹಳ ಸಂತೋಷವಾಯಿತು. ಆದರೆ, ಇಂದು ವಸ್ತುಸ್ಥಿತಿ ಏನಾಗಿದೆ? ಅಸ್ತಿಭಾರ ಹಾಕಿದ್ದಾರೆಯೆ ಹೊರತು ಇನ್ನೂ ಏನೂ ಕೆಲಸವಾಗಿಲ್ಲ. ಆದುದರಿಂದ, ಮಂಚನಬೆಲೆ ಮತ್ತು ಹಾರುಬೆಲೆ ಯೋಜನೆಗಳನ್ನು ಆದಷ್ಟು ಬೇಗನೆ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಣ್ಣ ನೀರಾವರಿಗೆ ಬಹಳಷ್ಟು ಅವಕಾಶಗಳಿವೆ ಈ ಬಗ್ಗೆ ಸರ್ಕಾರದವರು ಶೀಘ್ರವಾಗಿ ಗಮನ ಕೊಡಬೇಕು. ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೆತ್ತಿಗೊಂಡರೆ, ಅವುಗಳ ಪ್ರಯೋಜನ ಪಡೆಯು

ಬೇಕಾದರೆ ಬಹಳ ಕಾಲ ಬೇಕಾಗುತ್ತದೆ. ಅಷ್ಟೇ ಅಲ್ಲದೆ, ಈ ಯೋಜನೆ ಕೆಳಗಡೆ ಬರುವ ಆಸ್ತಿಗಳು ದೊಡ್ಡ ದೊಡ್ಡ ರೈತರಿಗೆ ಸೇರಿರುತ್ತವೆ. ಸಣ್ಣ ನೀರಾವರಿ ಯೋಜನೆಗಳಿಂದ ಶೀಘ್ರವಾಗಿ ಬಡ ರೈತರಿಗೆ ಬಹಳ ಅನುಕೂಲವಾಗುತ್ತದೆ.

ಇನ್ನು ಅಡ್ಮಿನಿಸ್ಟ್ರೇಷನ್ ವಿಚಾರ ಹಿಂದೆ ಬ್ರಿಟಿಷರ ಕಾಲದಲ್ಲಿ ಯಾವ ರೀತಿ ಆಡಳಿತ ಕ್ರಮವನ್ನು ಅನುಸರಿಸಲಾಗುತ್ತಿತ್ತು. ಅದೇ ಪದ್ಧತಿಯನ್ನು ಇಂದಿಗೂ ಅನುಸರಿಸಿಕೊಂಡು ಬರಲಾಗುತ್ತಿದೆ. ಇದಕ್ಕೆ ತಾವೂ ಕಾರಣರು, ನಾವೂ ಕಾರಣರು. ಬಡ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಇಂದಿನ ಸರ್ಕಾರ ಹೊರಟಿದೆ. ಆದರೆ, ಯಾವುದೇ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರುವವರು ಯಾರು? ಆಡಳಿತಗಾರರು. ಕಂದಾಯ ವಸೂಲಾತಿ ಮತ್ತು ದೇಶದ ಭದ್ರತೆ ವಿಚಾರದಲ್ಲಿ ನಾವು ಇಂಗ್ಲಿಷರ ಪದ್ಧತಿಯನ್ನೇ ಇಂದಿಗೂ ಮುಂದುವರಿಸಿಕೊಂಡು ಬರುತ್ತಿದ್ದೇವೆ. ಆದುದರಿಂದ, ಎಲ್ಲಿಯ ವರೆಗೆ ನಾವು ಈ ಪದ್ಧತಿಯನ್ನು ಕೈಬಿಡುವುದಿಲ್ಲ ಅಲ್ಲಿಯವರೆಗೆ ನಮ್ಮ ಬಡ ರೈತರಿಗೆ ಹಿತವಾಗುವುದಿಲ್ಲ ವೆಂದು ನನಗೆ ತೋರುತ್ತದೆ. ಇದರ ಜೊತೆಗೆ ಆಡಳಿತಗಾರರು ತಮ್ಮ ಮನೋಭಾವನೆಯನ್ನು ಬದ ಲಾವಣೆ ಮಾಡಿಕೊಳ್ಳಬೇಕು. ನಾವು ಅಧಿಕಾರ ನಡೆಸುವುದಕ್ಕೆಲ್ಲ ಇಲ್ಲಿಗೆ ಬಂದಿರುವುದು, ಬಡ ಜನರ ಸೇವೆ ಮಾಡಲಿಕ್ಕಾಗಿ ಎಂದು ಅವರು ತಿಳಿದಿದ್ದೇ ಆದರೆ, ನಮ್ಮ ರಾಜ್ಯವು ಆದಷ್ಟು ಶೀಘ್ರದಲ್ಲಿ ಅಭಿ ವೃದ್ಧಿ ಹೊಂದುತ್ತದೆ. ಆದರೆ, ಇಂದು ನಮ್ಮ ರಾಜ್ಯದಲ್ಲಿ ಅಧಿಕಾರಶಾಹಿ ಮನೋಭಾವದ ಆಡಳಿತ ಪದ್ಧತಿ ಇದೆ ಎಂದರೆ ತಪ್ಪಾಗಲಾರದು.

6-30 P. M.

ಇದಕ್ಕೆ ಯಾರು ಕಾರಣರು ಅನ್ನುವುದನ್ನು ಅಧಿಕಾರಿಶಾಹಿಗಳು ಅರ್ಥಮಾಡಿಕೊಳ್ಳಬೇಕು. ಅವರು ಇದಕ್ಕೆ ಸಿದ್ಧರಿಲ್ಲ. ಅವರಿಗೆ ಇವರ ಬಗ್ಗೆ ಒಂದು ಮನೋಭಾವ ಇರಬೇಕು. ಬರೀ ಸ್ತುತ್ಯ ಮಾಡಿಕೊಳ್ಳುವುದು ಬೇಡ. ಅಧಿಕಾರೀ ವರ್ಗದವರು ಹಳ್ಳಿಹಳ್ಳಿಗೆ ಹೋಗಿ ನೋಡಲಿ, ಅವರಿಗೆ ಬಡಜನರ ಕಷ್ಟ ಏನೆಂಬುದೇ ಗೊತ್ತಿಲ್ಲ. ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ ನಮ್ಮ ಸರ್ಕಾರದ ಇಲಾಖೆಗಳಲ್ಲಿ ಮುಖ್ಯಾಧಿಕಾರಿಗಳು ಏನು ಇದ್ದಾರೆ ಅವರು ದಯವಿಟ್ಟು ಹಳ್ಳಿಗಳಲ್ಲಿ ಹೋಗಬೇಕು. ಕನಿಷ್ಟಪಕ್ಷ ವರ್ಷಕ್ಕೆ ಒಂದು ತಿಂಗಳಾದರೂ ಕೂಡ ಅವರನ್ನು ಹಳ್ಳಿಗಳಲ್ಲಿ ಕೆಲಸ ಮಾಡುವುದಕ್ಕೆ ಕಳು ಹಿಸಿ ಆಗಮಾತ್ರ ಹಳ್ಳಿಯವನ ಕಷ್ಟ ಏನೆಂಬುದು ಆ ಅಧಿಕಾರಿಗಳಿಗೆ ಗೊತ್ತಾಗುತ್ತದೆ, ಅವನು ಯಾವ ರೀತಿ ಕಷ್ಟಪಡುತ್ತಾನೆ ಎಂಬುದು ಗೊತ್ತಾಗುತ್ತದೆ. ಉದಾಹರಣೆಗೆ ಈವೊತ್ತು ಚೈನಾ ದೇಶದ ಒಂದು ಸಿಸ್ಟಂ ನೋಡಿ ಅಲ್ಲಿಯಾವ ಅಧಿಕಾರಿಯೇ ಇರಲಿ ಆತನು ವರ್ಷಕ್ಕೆ ಒಂದು ತಿಂಗಳ ಕಾಲ ಹಳ್ಳಿಗಳಲ್ಲಿ ಕೆಲಸ ಮಾಡುವುದಕ್ಕೆ ಕಳುಹಿಸುತ್ತಾರೆ. ಅದೇ ರೀತಿ ಕ್ಯೂಬಾ ತೆಗೆದುಕೊಳ್ಳಿ, ಆಫ್ರಿಕನ್ ಕಂಟ್ರೀಸ್ ತೆಗೆದುಕೊಳ್ಳಿ ಅಲ್ಲೆಲ್ಲಾ ಈ ರೀತಿಯ ಒಂದು ಸಿಸ್ಟಂ ಇದೆ. ಈ ವಿಚಾರದಲ್ಲಿ ಇನ್ನೂ ಹೇಳುವುದು ಬೇಕಾದಷ್ಟು ಇತ್ತು. ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ಬೇರೆ ಸಮಯವನ್ನು ತೆಗೆದುಕೊಂಡು ಮಾತನಾಡುತ್ತೇನೆ. ಇಷ್ಟು ವಿಚಾರಗಳನ್ನು ನಾನು ಈಗ ಹೇಳಿ, ಈ ರಾಜ್ಯಪಾಲರ ಭಾಷಣದಲ್ಲಿ ಯಾವ ಒಂದು ತಿರುಳೂ ಇಲ್ಲ ಆದುದರಿಂದ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ.ಕೆ. ಸುಬ್ಬಯ್ಯ (ವೀರಾಜಪೇಟೆ).—ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣ ವನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ಮೆಡಿಕಲ್ ಸರ್ವಿಸಸ್ ಬಗ್ಗೆ ಹೇಳುತ್ತೇನೆ, ನಾನು ವಾಸ ಮಾಡತಕ್ಕಂಥಾ ಕ್ಷೇತ್ರ ಬರೇ ಪ್ಲಾಂಟೇಷನ್ ಲೇಬರರ್ಸ್ ಇರತಕ್ಕಂಥಾ ಜಾಗ. ಅಲ್ಲಿ ಒಂದು ರೂರಲ್ ಆಸ್ಪತ್ರೆ ಇದೆ. ಅಲ್ಲಿ ಇಬ್ಬರು ಡಾಕ್ಟರ್ ಇದ್ದರು. ಈಗ ಒಂದು ತಿಂಗಳಿನಲ್ಲಿ ಒಬ್ಬ ಡಾಕ್ಟರ್‌ಗೆ ವರ್ಗ ಆದುದರಿಂದ ಆ ಜಾಗ ಖಾಲಿಯೇ ಇದೆ. ಅಲ್ಲಿ ಇನ್ನೊಬ್ಬರು ಲೇಡಿ ಡಾಕ್ಟರ್ ಇದ್ದರು. ಅವರನ್ನೂ ಕೂಡ ವರ್ಗ ಮಾಡಿದ್ದ ರಿಂದ ಆ ಜಾಗ ಕೂಡ ಖಾಲಿಯಾಗಿಯೇ ಇದೆ. ಈವಾಗ ಅಲ್ಲಿ ಯಾವ ಡಾಕ್ಟರೂ ಇಲ್ಲ. ಬೇಗನೆ ಅಲ್ಲಿಗೆ ಡಾಕ್ಟರ್ ಅನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನ್ಯೂಟ್ರಿಷನ್ ಪ್ರೋಗ್ರಾಂ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ತಿಳಿಸಲಾಗಿದೆ ಅದು ಒಳ್ಳೆಯ ಕಾರ್ಯಕ್ರಮ ಎಂದು ಹೇಳುತ್ತೇನೆ. ಆದರೆ ಈ ಕಾರ್ಯಕ್ರಮ ಟ್ರೈಬಲ್ ಏರಿಯಾ ದಲ್ಲಿ ಯಾವರೀತಿ ನಡೆಯುತ್ತದೆ ಅನ್ನುವುದನ್ನು ವಿಚಾರ ವಿನಿಮಯ ಮಾಡಿ ನೋಡುವುದಕ್ಕೆ ಇದಕ್ಕೆ

ಸಾಕಷ್ಟು ಸಿಬ್ಬಂದಿ ಇಲ್ಲ ಅಂತ ಗೊತ್ತಾಗಿದೆ. ಆದುದರಿಂದ ಇದಕ್ಕೆ ಆದಷ್ಟು ತ್ವರಿತವಾಗಿ ಬೇಕಾದಷ್ಟು ಸಿಬ್ಬಂದಿಯನ್ನು ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಇನ್ನು ಸೋಷಿಯಲ್ ವೆಲ್‌ಫೇರ್ ಫಾರ್ ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಟ್ರೈಬ್ಸ್ ಬಗ್ಗೆ ಮಾನ್ಯ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ ಆ ವಿಚಾರದಲ್ಲಿ ನಾನು ತಮ್ಮ ಗಮನಕ್ಕೆ ಒಂದು ವಿಷಯ ವನ್ನು ತರಬಯಸುತ್ತೇನೆ ಅದೇನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಗಿರಿಜನ ಅಭಿವೃದ್ಧಿ ಬ್ಲಾಕ್‌ಗಳು ಇವೆ. ಅಲ್ಲಿ ಏನು ನಡೆಯುತ್ತದೆ ಎಂದರೆ ಅಲ್ಲಿಗೆ ಯಾವ ಮೇಲ್ಪಟ್ಟದ ಸರ್ಕಾರೀ ಉದ್ಯೋಗಸ್ಥರನ್ನು ಹಾಕಿದರೂ ಆ ಜಾಗದಲ್ಲಿ ಇರುವುದಿಲ್ಲ. ಈಗ ಬಂದಿರ ತಕ್ಕಂಥಾ ಮಾನ್ಯ ಮಂತ್ರಿಗಳು ಹೊಸಬರಾಗಿದ್ದಾರೆ. ಇದರ ಬಗ್ಗೆ ಅವರು ಎಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್‌ಗೆ ಚುನಾವಣೆ ಮಾಡುವ ಕಾಲ ಹತ್ತಿರ ಬರುತ್ತಾ ಇದೆ. ಮಾನ್ಯ ಪ್ರಭಾಕರ್‌ರವರು ಹರಿಜನ ಮತ್ತು ಗಿರಿಜನರಿಗೆ ಸೀಟುಗಳನ್ನು ಕೊಡುವ ಬಗ್ಗೆ ಎಷ್ಟು ಕಾದಿರಿಸಬೇಕು ಎನ್ನತಕ್ಕಂಥಾ ವಿಚಾರವನ್ನು ಒಂದು ಗಂಟೆ ಹಿಂದೆ ಹೇಳಿದರು. ಎಲೆಕ್ಷನ್ ಬಗ್ಗೆ ಡಿವಿಷನಲ್ ಕಮೀಷನರ್ ಒಂದು ನೋಟಿಫಿಕೇಷನ್ ಅನ್ನು ಹೊರಡಿಸಿದ್ದಾರೆ. ಸ್ಲಮ್ಸ್‌ನಲ್ಲಿರತಕ್ಕಂಥಾ ಷೆಡ್ಯೂಲ್ಡ್ ಕ್ಯಾಸ್ಟ್ ನವರಿಗೆ ಇಷ್ಟು ರಿಸರ್ವೇಷನ್ ಕೊಡಬೇಕು ಎಂದು ಹೇಳಿದ್ದಾರೆ. ಆದರೆ ಟ್ರೈಬ್ಸ್‌ನವರ ವಿಚಾರದಲ್ಲಿ ಏನೂ ಹೇಳಿಲ್ಲಾ. ಮೈಸೂರು ಡಿವಿಷನ್‌ನಲ್ಲಿ ಗಿರಿಜನರು ಹೆಚ್ಚಾಗಿ ಇದ್ದರೂ ಕೂಡ ತಾಲ್ಲೂಕು ಬೋರ್ಡ್ ಎಲೆಕ್ಷನ್‌ಗೆ ಏತಕ್ಕಾಗಿ ಇವರಿಗೆ ರಿಸರ್ವೇಷನ್ ಮಾಡಿಲ್ಲಾ ಎನ್ನುವುದು ಗೊತ್ತಾಗುತ್ತಾ ಇಲ್ಲ. ಆ ಬಗ್ಗೆ ನನ್ನ ಆಶ್ಚರ್ಯವನ್ನು ವ್ಯಕ್ತಪಡಿಸಬೇಕಾಗಿದೆ. ಅದಕ್ಕೆ ನನ್ನ ಒಂದು ಸೂಚನೆ ಏನೆಂದರೆ ಗಿರಿಜನರಿಗೆ ಸೀಟುಗಳ ಬಗ್ಗೆ ಯಾವರೀತಿಯಾದ ಒಂದು ರಿಸರ್ವೇಷನ್ ಅನ್ನು ಇಟ್ಟಿದ್ದಾರೋ ಅದೇರೀತಿ ತಾಲ್ಲೂಕ್ ಬೋರ್ಡ್ ಎಲೆಕ್ಷನ್‌ಗೂ ಕೂಡ ಇರಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಈ ಗಿರಿಜನರ ಬ್ಲಾಕ್‌ಗಳ ಬಗ್ಗೆ ಒಂದು ಮೇಲ್ವಿಚಾರಣಾ ಸಮಿತಿಯನ್ನು ಮಾಡಿದರೆ ಅವರ ಕಷ್ಟಸುಖ ಗಳನ್ನು ವಿಚಾರ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡು ತ್ತೇನೆ.

ಇನ್ನು ಓಲ್ಡ್ ಏಜ್ ಪೆನ್‌ಷನ್ ವಿಚಾರ. ಈ ಒಂದು ಯೋಜನೆ ಬಹಳ ಚೆನ್ನಾಗಿದೆ. ಈ ಯೋಜನೆಯಿಂದ ಬಹಳ ಜನರಿಗೆ ಪೆನ್‌ಷನ್ ಮಂಜೂರಾಗಿರುವುದು ಸಂತೋಷ. ಆದರೆ ಇವರಿಗೆ ಎಂ.ಒ. ಮುಖಾಂತರ ಏನು ಪೆನ್‌ಷನ್ ದುಡ್ಡು ಬರುತ್ತಾ ಇದೆ ಅದರಿಂದ ಅವರಿಗೆ ಸ್ವಲ್ಪ ಅಡಚಣೆಉಂಟಾಗು ತ್ತದೆ. ಹೇಗೆಂದರೆ ಪೋಸ್ಟ್ ಆಫೀಸ್‌ನವರು ಎಂ.ಒ. ಅನ್ನು ೭ ದಿವಸಕ್ಕಿಂತ ಮೇಲಾಗಿ ಇಟ್ಟುಕೊಳ್ಳು ವುದಿಲ್ಲ. ನಂತರ ಅವರು ಎಂ.ಒ. ರಿಟನ್ ಮಾಡುವಾಗ ಆಬ್ಸೆಂಟ್ ಅಂತ ಆಗಲಿ, ನಾಟ ನೋನ್ ಅಂತಾಗಲಿ ಒಂದು ರಿಮಾರ್ಕ್ ಬರೆದು ರಿಟರ್ನ್ ಮಾಡಿಬಿಡುತ್ತಾರೆ. ಹೀಗಾಗಿ ಎಷ್ಟೋ ಜನಕ್ಕೆ ಬಹಳ ತೊಂದರೆಯಾಗಿದೆ. ಮಂಜೂರಾದ ಓಲ್ಡ್ ಏಜ್ ಪೆನ್‌ಷನ್ಸ್ ಸರಿಯಾದ ಕಾಲಕ್ಕೆ ಸಿಗದೆ ಅವರುಗಳು ೭–೮ ತಿಂಗಳಿಂದ ಬಹಳ ತೊಂದರೆಗೆ ಈಡಾಗಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ನಾನು ಹೇಳು ವುದೇನೆಂದರೆ ಈ ಬಗ್ಗೆ ಮೊದಲು ಯಾವ ಒಂದು ಕ್ರಮ ಇತ್ತು ಅದನ್ನೇ ಜಾರಿಗೆ ಕೊಡಬೇಕು ಎಂದು ಹೇಳುತ್ತೇನೆ. ಮೊದಲು ಅವರುಗಳು ಅಲ್ಲಿ ಟ್ರೆಜರಿಯಲ್ಲೇ ಹೋಗಿ ತೆಗೆದುಕೊಳ್ಳುತ್ತಿದ್ದರು. ಆ ರೀತಿ ಮಾಡಿದರೆ ಅವರಿಗೆ ಈ ಯೋಜನೆಯಿಂದ ಫಲಕಾರಿಯಾಗುತ್ತದೆ ಎಂದು ಹೇಳುತ್ತೇನೆ. ಇನ್ನು ಈ ಬಗ್ಗೆ ಮಾತನಾಡುವುದು ಬಹಳ ಇತ್ತು. ಆದರೆ ಈಗ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಅವುಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಬೇರೆ ಸಂದರ್ಭ ಬಂದಾಗ ಉಪಯೋಗಿಸಿಕೊಳ್ಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ.ಎಂ. ಇಬ್ರಾಹಿಂ (ಶಿವಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣವನ್ನು ನೋಡಿದರೆ ನನಗೆ ಏನು ಅನ್ನಿಸುತ್ತದೆ ಎಂದರೆ ನಮ್ಮ ಹಳ್ಳಿಯೊಳಗೆ ಜಾತ್ರೆ ಸಮಯದಲ್ಲಿ ಒಬ್ಬ ಬಂದು ಬೊಂಬೆ ಆಟವನ್ನು ಆಡಿಸುತ್ತಾನೆ. ಅದು ಹೇಗೆ ಇರುತ್ತದೆ ಎಂದರೆ ಅವನು ಮೇಲೆ ನಿಂತುಕೊಂಡು ಹುಡುಗರನ್ನು ಗುಂಪು ಕಟ್ಟಿಸಿಕೊಂಡು ಏನು ಹೇಳುತ್ತಾನೆ ಎಂದರೆ ಅದೋ ಇಲ್ಲಿ ಟಾಜ್ ಮಹಲ್ ನೋಡಿ, ಅದೋ ಇಲ್ಲಿ ಟಿಪ್ಪೂಸುಲ್ತಾನ್ ಅರಮನೆ ನೋಡಿ ಎಂದು ಹೇಳುತ್ತಾನೆ. ಹಾಗೆ ನಮ್ಮ ಘನ ಸರ್ಕಾರದವರು ಮಾನ್ಯ ರಾಜ್ಯಪಾಲರ ಬಾಯಲ್ಲಿ ಅಲ್ಲಿ ನೋಡಿ ಇಲ್ಲಿ ನೋಡಿ ಆ ಮನೆ

ನೋಡಿ ಈ ಮನೆ ನೋಡಿ ಎಂದು ಹೇಳಿಸಿದ್ದಾರೆ. ಅವರ ಉತ್ತರ ನೋಡಿದರೆ ಬೊಂಬಾಯಿ ಸರ್ಕಸ್ ಇದ್ದ ಹಾಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಮಾತನಾಡತಕ್ಕಂಥಾ ಸಂದರ್ಭದಲ್ಲಿ ನೋಡಿದರೆ ಯಾರೂ ಕೂಡ ಗ್ರಾಮಾಂತರದ ಅಭಿವೃದ್ಧಿ ಬಗ್ಗೆ ಪ್ರಸ್ತಾಪ ಮಾಡಿಲ್ಲಾ. ಆದುದರಿಂದ ಮಾನ್ಯ ಅಧ್ಯಕ್ಷರೇ ನಾನು ಇಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಪದೇ ಪದೇ ಹೇಳುತಿ ದ್ದಾರೆ ಏನೆಂದರೆ ಸಮಾಜವಾದ ತರುತ್ತೇವೆ, ಸಾಮಾಜಿಕ ನ್ಯಾಯ ತರುತ್ತೇವೆ ಎಂದು ಕಳೆದ ೩೦ ವರ್ಷದಿಂದಲೂ ಕೂಡ ರೈತನ ಹಿತವನ್ನು ಯಾರಾದರೂ ಕೂಡ ಗಮನದಲ್ಲಿಟ್ಟುಕೊಂಡು ನೋಡಿದರೆ ಅವನಿಗೆ ಈ ದೇಶದಲ್ಲಿ ಸಾಮಾಜಿಕ ನ್ಯಾಯ ಸಿಕ್ಕಿದೆಯೇ, ಈವೊತ್ತಿನ ದಿವಸ ಅವನು ಅನುಕೂಲವಾಗಿದ್ದಾನೆಯೇ, ಈವೊತ್ತಿನ ದಿವಸ ಅವನಿಗೆ ಏನಾದರೂ ಸರ್ಕಾರದಿಂದ ಪ್ರೋತ್ಸಾಹ ಸಿಕ್ಕಿದೆಯೇ ಅನ್ನುವುದನ್ನು ವಿಚಾರ ಮಾಡಿ ನೋಡಿದರೆ ಇಲ್ಲ. ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ರೈತನಿಗೆ ತನ್ನ ಬೆಳೆಯಿಂದ ಯಾವ ಲಾಭವೂ ಈ ದಿವಸ ಸಿಗುತ್ತಿಲ್ಲ. ಆದರೆ ಇದರ ಲಾಭ ಯಾರಿಗೆ ಹೋಗುತ್ತದೆ ಅನ್ನುವುದನ್ನು ಹೇಳುತ್ತೇನೆ. ಈವೊತ್ತು ಪೇಪರ್ ತಯಾರು ಮಾಡತಕ್ಕಂಥಾ ಮಾಲೀಕ ಇದ್ದರೆ,ಅವನ್ನು ತಾನು ತಯಾರುಮಾಡತಕ್ಕಂಥಾ ವಸ್ತುವಿಗೆ ಬೆಲೆ ಕಟ್ಟಿ ಅದರಿಂದ ಲಾಭವನ್ನು ಪಡೆಯುತ್ತಾನೆ ಹಾಗೆಯೇ ಬಟ್ಟೆ ತಯಾರುಮಾಡುವ ಮಾಲೀಕ ತನ್ನ ಬಟ್ಟೆಗೆ ಇಷ್ಟು ಅಂತ ಬೆಲೆ ಕಟ್ಟಿ ಅದರ ಲಾಭವನ್ನು ಅವನು ಪಡೆಯುತ್ತಾನೆ. ಆದರೆ ರೈತ ತಾನು ತಯಾರು ಮಾಡಿದಂಥಾ ವಸ್ತುಗಳಿಗೆ ವಿಧಾನಸೌಧದಲ್ಲಿ ಕುಳಿತಿರತಕ್ಕಂಥಾ ಸಾಹೇಬರುಗಳು ಇದ್ದಾರಲ್ಲಾ ಅವರು ಇದಕ್ಕೆ ಬೆಲೆ ಕಟ್ಟುವಂಥಾವರು. ಹೀಗಾದರೆ ಈವೊತ್ತು ದೇಶದಲ್ಲಿ ರೈತನಿಗೆ ಒಂದು ಸಾಮಾಜಿಕ ನ್ಯಾಯ ಸಿಗುತ್ತದೆಯೇ ಎಂದು ಕೇಳುತ್ತೇನೆ. ಮತ್ತು ಈವೊತ್ತು ರೈತನು ತನ್ನ ಕೃಷಿಗೆ ಬೇಕಾದಂಥಾ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೆ ಎಷ್ಟು ತೆರಬೇಕಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ ನೋಡಿದರೆ ಅವನಿಗೇನಾದರೂ ಸರ್ಕಾರದಿಂದ ಸಂರಕ್ಷಣೆ ಇದೆಯೇ ಅನ್ನುವುದನ್ನು ನಾವು ಗಮನಿಸಬೇಕಾಗಿದೆ. ಈವೊತ್ತಿನ ದಿವಸ ದೊಡ್ಡವರು ಯಾರಾದರೂ ಕಾರನ್ನು ತೆಗೆದುಕೊಂಡು ಅದನ್ನು ಮರಕ್ಕೆ ಡಿಕ್ಕಿ ಹೊಡೆಸಿದರೆ ಆದಕೆ ಪರಿಹಾರ ಇನ್‌ಷೂರೆನ್ಸ್ ಕಂಪನಿಯವರು ಕೊಡುತ್ತಾರೆ. ಆದರೆ ಈವೊತ್ತು ರೈತ ತನ್ನ ವ್ಯವಸಾಯಕ್ಕೆ ೩ ಸಾವಿರ ರೂಪಾಯಿ ಕೊಟ್ಟು ಎತ್ತುಗಳನ್ನು ಕೊಂಡುಕೊಂಡರೆ, ಅದು ಒಂದು ವೇಳೆ ದಾರಿಯಲ್ಲಿ ಸತ್ತುಹೋದರೆ ಅದಕ್ಕೆ ಪರಿಹಾರ ಕೊಡುತ್ತಾ ಇಲ್ಲ. ಈವೊತ್ತು ಯಾರಾದರೂ ಬಿಲ್ಡಿಂಗ್ಸ್ ಕಟ್ಟಿಸಿದರೆ ಅದೇನಾದರೂ ಹಾನಿ ಆದರೆ ಅದರ ಲುಕ್ಸಾನು ಅನ್ನು ಇನ್‌ಷೂರೆನ್ಸ್ ಕಂಪನಿಯವರು ಕೊಡುತ್ತಾರೆ. ಆದರೆ ರೈತ ೬ ತಿಂಗಳು ಕಾಲ ದುಡಿದು ಏನಾದರೂ ಬೆಳೆ ಬೆಳೆಯುವಾಗ ಮಧ್ಯದಲ್ಲಿ ಆ ಬೆಳೆಗೆ ತೊಂದರೆಯಾದರೆ ಅಂದರೆ ಏನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಪರಿಹಾರ ಕೊಡುವುದಿಲ್ಲ ಎಂದರೆ ಇದು ಯಾವ ಸಾಮಾಜಿಕ ನ್ಯಾಯ ಎಂದು ನಾನು ಕೇಳುತ್ತೇನೆ. ಈ ದೇಶದಲ್ಲಿ ೧೦೦ಕ್ಕೆ ೮೦ ರಷ್ಟು ಜನ ಹಳ್ಳಿಗಾಡಿನಲ್ಲಿ ವಾಸ ಮಾಡುತ್ತಿದ್ದಾರೆ. ಅಲ್ಲಿ ಕೂಲಿಗಾರ ವರ್ಗ ಏನು ಇದ್ದಾರೆ, ನೇಕಾರರು ಏನು ಇದ್ದಾರೆ, ಬಡಗಿ ಕೆಲಸದವರು ಏನು ಇದ್ದಾರೆ, ಮತ್ತು ಹೊಲದಲ್ಲಿ ದುಡಿಯುವವರು ಏನು ಇದ್ದಾರೆ ಅವರಿಗೆ ದಿನಕ್ಕೆ ೩ ರೂಪಾಯಿ ಸಿಕ್ಕುವುದೇ ಕಷ್ಟ. ಅದೇ ತಾಲ್ಲೂಕ್ ಆಫೀಸಿನಲ್ಲಿರುವ ಗುಮಾಸ್ತ ೧೦ ವರ್ಷ ಸರ್ಕಾರೀ ಆಫೀಸಿನಲ್ಲಿ ಕೆಲಸ ಮಾಡಿ ೧೧ನೇ ವರ್ಷ ಸತ್ತರೆ ಅವನಿಗೆ ಸರ್ಕಾರದಿಂದ ಪರಿಹಾರ ಸಿಕ್ಕುತ್ತದೆ. ಆದರೆ ರೈತ ತನ್ನ ಹೊಲದಲ್ಲಿ ತಾನು ದುಡಿಯಬೇಕು, ಬಡಗಿಗಳು ಕೂಲಿಗಾರರು ೨೦ ವರ್ಷ ದುಡಿದು ೨೧ನೇ ವರ್ಷದಲ್ಲಿ ಏನಾದರೂ ಅವರು ಸತ್ತರೆ ಅವರಿಗೆ ಯಾವ ವಿಧವಾದಂಥಾ ಪರಿಹಾರವೂ ಸರ್ಕಾರದಿಂದ ಇಲ್ಲ. ಇದು ಸಮಾಜವಾದವೇ ? ಇದು ಸಾಮಾಜಿಕ ನ್ಯಾಯವೇ? ಈವೊತ್ತು ಸಮಾಜವಾದದ ನಿಜವಾದ ಅರ್ಥವೇ? ಇದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ನಾನು ಈವೊತ್ತು ಈ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೆ. ಆದರೆ ಅದನ್ನೆಲ್ಲಾ ಹೇಳಲು ಅವಕಾಶ ಇಲ್ಲದೇ ಇರುವುದರಿಂದ ಕೆಲವೊಂದು ನಿರ್ದಿಷ್ಟವಾದ ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆರೋಗ್ಯದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರಿನಲ್ಲಿ ಕ್ಯಾನ್ಸರ್ ರೋಗದ ಬಗ್ಗೆ ಸಂಶೋಧನೆ ಮಾಡಲು ಮತ್ತು ಈ ರೋಗವನ್ನು ಗುಣಪಡಿಸುವ ಸಲುವಾಗಿ ಕಿದ್ವಾಯಿ ಇನ್‌ಸ್ಟಿಟ್ಯೂಟ್ ಇದೆ. ಇದನ್ನು ರಾಜಕೀಯ ಒತ್ತಡಕ್ಕೆ ಸಿಲುಕಿಸಿ ಇದಕ್ಕೆ ಬರತಕ್ಕಂಥ ಗ್ರಾಂಟನ್ನು ಡೈರಕ್ಟರೇಟ್ ಲೆವಲಿನಲ್ಲಿಯೇ ನಿಲ್ಲಿಸಿಬಿಟ್ಟಿದ್ದಾರೆ. ಈ ಆಸ್ಪತ್ರೆಗೆ ಬರತಕ್ಕಂಥ ಗ್ರಾಂಟ್ ಎಂದರೆ ೫೦ ಸಾವಿರ ರೂ. ಗಳು ಮಾತ್ರ. ನಮ್ಮಲ್ಲಿ ಪ್ರತಿವರ್ಷವೂ ೪೦ ಸಾವಿರ ಜನರು ಈ ರೋಗಕ್ಕೆ ತುತ್ತಾಗು

ತ್ತಿದ್ದಾರೆ. ತಾರೀಖು ೨೫ನೇ ಜೂನ್ ೧೯೭೫ ರಂದು ಈ ದೇಶದಲ್ಲಿ ೧೯ ತಿಂಗಳುಗಳ ಕಾಲ ಸೂರ ಮುಳುಗಿದ ಮೇಲೆ ಅಧಿಕಾರಿಗಳು ಮತ್ತು ಡಾಕ್ಟರುಗಳು ಜನರನ್ನು ಹಿಡಿದುಕೊಂಡು ಬಂದು ಕಂಪಲಿಸರಿ ಸ್ಟರಲೈಜೇಷನ್ ಮಾಡಿದರು. ಬಲಾತ್ಕಾರವಾಗಿ ಅಪರೇಷನ್ ಮಾಡಿದರು. ಇದರಿಂದ ಯಾರಾದರು ರೋಗಕ್ಕೆ ತುತ್ತಾಗಿದ್ದರೆ ಅಂತಹವರಿಗೆ ಉಚಿತವಾಗಿ ಪರಿಹಾರ ಕೊಟ್ಟು, ಉಚಿತ ಚಿಕಿತ್ಸೆ ಕೊಡಬೇಕೆಂದು ಕೇಂದ್ರ ಸರ್ಕಾರದವರು ಒಂದು ನಿರ್ಣಯ ಮಾಡಿದರು. ಆದರೆ ಅನೇಕ ರಾಜ್ಯಸರ್ಕಾರಗಳು ಇದನ್ನು ಜಾರಿಗೆ ತರಲಿಲ್ಲ. ನನ್ನ ಕ್ಷೇತ್ರದಲ್ಲಿ ೨೨–೨೩ ಇಂತಹ ಕೇಸ್‌ಗಳಿವೆ. ಹುಚ್ಚರನ್ನು, ಅರೆ–ಹುಚ್ಚರನ್ನು ಬಲವಂತವಾಗಿ ಹಿಡಿದುಕೊಂಡು ಬಂದು ಅಪರೇಷನ್ ಮಾಡಿದರು. ಇದರ ಒಂದು ತೊಂದರೆಗೆ ಒಳಗಾದವರಿಗೆ ಯಾವುದೇ ಟ್ರೀಟ್‌ಮೆಂಟ್ ಕೊಡಲು ಈ ಸರ್ಕಾರ ಮುಂದೆ ಬರುತ್ತಿಲ್ಲ.

ಇನ್ನು ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಇದೇ ಆಹಾರವನ್ನು ಮಾನ್ಯ ಮಂತ್ರಿಗಳು ತಮ್ಮ ಮಕ್ಕಳಿಗೆ ಕೊಟ್ಟರೆ ಆಗ ಅದರಲ್ಲಿ ಎಷ್ಟರಮಟ್ಟಿನ ಪೌಷ್ಟಿಕ ಇದೆ ಎಂಬುದು ಅವರಿಗೆ ಗೊತ್ತಾಗುತ್ತದೆ. ನನ್ನ ಕ್ಷೇತ್ರವಾದ ಶಿವಾಜಿನಗರದಲ್ಲಿಯೇ ಬ್ರೆಡನ್ನು ಕೊಡುತ್ತಾರೆ. ಆ ಬ್ರೆಡ್‌ನಲ್ಲಿ ಕೊಳೆತ ವಾಸನೆ ಬರುತ್ತದೆ.

ಇನ್ನು ವಿದ್ಯಾ ಇಲಾಖೆಯ ಬಗ್ಗೆ ಬಹಳ ಗಂಭೀರವಾದಂಥ ಭಾಷಣ ಮಾಡಿದ್ದಾರೆ. ಈ ರಾಜ್ಯದ ಬೇರೆ ಭಾಗದ ವಿಷಯವನ್ನು ನಾನು ಹೇಳುವುದಿಲ್ಲ. ನನ್ನ ಕ್ಷೇತ್ರದ್ದೇ ಅಂದರೆ ಇಲ್ಲಿಗೆ ಒಂದು ಫರ್ಲಾಂಗ್ ದೂರದಲ್ಲಿ ಸಂಪಂಗೀರಾಮನಗರ ಎಂದು ಇದೆ. ಅಲ್ಲಿ ಅಲ್ಪಸಂಖ್ಯಾತರಿಗಾಗಿ ಒಂದು ಉರ್ದು ಶಾಲೆ ಇದೆ. ಆ ಶಾಲೆಯ ಕೊಠಡಿಯ ಉದ್ದ ಮತ್ತು ಅಗಲ ೬ ಮತ್ತು ೪ ಅಡಿಗಳಿವೆ. ಅಷ್ಟರಲ್ಲಿಯೇ ೧೧೦ ಹುಡುಗರು ಕಲಿಯಬೇಕಾಗಿದೆ. ಒಂದರಿಂದ ನಾಲ್ಕನೆಯ ತರಗತಿಯವರೆಗೆ ಇಲ್ಲಿ ಬೇರೆ ಬೇರೆ ಸಮಯದಲ್ಲಿ ಪಾಠಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇವರು ಅಲ್ಪಸಂಖ್ಯಾತರ ಬಗ್ಗೆ ಎಷ್ಟರಮಟ್ಟಿಗೆ ಗಮನಹರಿಸಿದ್ದಾರೆಂಬುದು ಇದರಿಂದಲೇ ತಿಳಿಯುತ್ತದೆ. ಬೆಳಕಿನ ಕೆಳಗೆ ಕತ್ತಲೆ ಇರುತ್ತದೆ ಎಂಬ ಗಾದೆಯಂತೆ, ಈ ಶಾಲೆಯ ಪಕ್ಕದಲ್ಲಿಯೇ ಇರತಕ್ಕಂಥ ಮಿಡಲ್ ಸ್ಕೂಲಿನಲ್ಲಿ ೨ ಸಾವಿರ ಜನ ವಿದ್ಯಾರ್ಥಿಗಳಿದ್ದಾರೆ. ಇಲ್ಲಿ ೧೩ ಜನ ಮಾಸ್ತರರಿದ್ದಾರೆ. ಈ ೧೩ ಜನರ ಪೈಕಿ ೭ ಜನರು ಡೆಪ್ಯೂಟೇಷನ್ ಮೇಲೆ ಇದ್ದಾರೆ. ಅಂದರೆ ಹೋಗುವುದು, ಬರುವುದು ; ಬೆಂಗಳೂರು ನಗರದಲ್ಲಿಯೇ ಈ ರೀತಿ ನಡೆಯಬೇಕಾದರೆ ಇನ್ನು ಬೇರೆ ಕಡೆಗಳಲ್ಲಿ ಏನು ಸ್ಥಿತಿ ಇದೆಯೋ ಗೊತ್ತಿಲ್ಲ.

ಇನ್ನು ಜನತಾ ಮನೆಗಳ ವಿಚಾರ ಇಲ್ಲಿ ಹೇಳಿದ್ದಾರೆ. ಮಾನ್ಯ ಮಂತ್ರಿಗಳು, ದೊಡ್ಡ ದೊಡ್ಡ ಸರ್ಕಾರದ ಅಧಿಕಾರಿಗಳು ವಾಸವಾಗಿರುವಂತಹ ಮನೆಗಳ ಒಂದು ತಿಂಗಳ ಬಾಡಿಗೆ ೩ರಿಂದ ೪ ಸಾವಿರ ರೂಪಾಯಿ ಆಗುತ್ತದೆ. ಈ ಮನೆಗಳ ಉದ್ದ ಮತ್ತು ಅಗಲ ೧೦೦–೧೫೦ ಅಡಿಗಳಿರುತ್ತದೆ. ಆದರೆ ಬಡವರು ವಾಸ ಮಾಡುವ ಜನತಾ ಮನೆಗಳು ಯಾವ ರೀತಿ ಇರುತ್ತವೆಂದರೆ, ಗಂಡಹೆಂಡತಿ ಮನೆ ಒಳಗೆ ಮಲಗಿದರೆ ಮಕ್ಕಳು ಹೊರಗೆ ಮಲಗಬೇಕು, ಇಲ್ಲವೇ ಮಕ್ಕಳು ಒಳಗೆ ಮಲಗಿದರೆ ಗಂಡಹೆಂಡತಿ ಹೊರಗಡೆ ಮಲಗಬೇಕು ; ಆ ರೀತಿ ಇವೆ. ಇಂತಹ ಮನೆಯಲ್ಲಿ ಮಾನ ಏನಾದರು ಇದ್ದರೆ ಫ್ಯಾಮಿಲಿ ಪ್ಲಾನಿಂಗ್ ಆಟೋಮ್ಯಾಟಿಕ್ ಆಗಿ ಆಗುತ್ತದೆ. ಈ ಮನೆಗಳಲ್ಲಿ ಕಾಲು ನೀಡಿಕೊಂಡು ಮಲಗಲು ಸಾಧ್ಯವಿಲ್ಲ. ಎಷ್ಟೋ ಕಡೆ ಈಗಾಗಲೇ ಬಿದ್ದು ಹೋಗಿವೆ. ಶಿರಹಟ್ಟಿಗೆ ಹೋದಾಗ ಇಂತಹ ಜನತಾ ಮನೆಗಳನ್ನು ನೋಡಿದೆ. ಆ ಮನೆಗಳಲ್ಲಿ ವಾಸ ಮಾಡುವಾತ ಹೇಳಿದ, ಕಾಂಗ್ರೆಸ್ ಸರ್ಕಾರದವರು ಈ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆಂದು ಹೇಳಿ ಒಂದು ಸಲ ತನ್ನ ಮುಷ್ಟಿಯಿಂದ ಗೋಡೆಗೆ ಹೊಡೆದ, ಆಗ ಗೋಡೆಯೇ ಬಿದ್ದುಹೋಯಿತು. ಎರಡೂವರೆ ಸಾವಿರ ರೂ.ಗಳನ್ನು ಖರ್ಚು ಮಾಡಿ ಇಂತಹ ಟೆಂಪರರಿ ಮನೆಗಳನ್ನು ಕಟ್ಟಿಸುವುದಕ್ಕಿಂತ ಹತ್ತು ಸಾವಿರ ರೂ. ಗಳನ್ನು ಖರ್ಚು ಮಾಡಿ ಒಳ್ಳೆಯ ಮನೆಗಳನ್ನು ಬಡವರಿಗೆ ಕಟ್ಟಿಸಿಕೊಡಿ. ಇದನ್ನು ಯಾರು ಬೇಡ ಎಂದು ಹೇಳುವುದಿಲ್ಲ. ನಿಮ್ಮ ಮನೆಗಳಿಗೆ ೪–೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಾಗ ಇವರಿಗೆ ಕೇವಲ ಎರಡೂವರೆ ಸಾವಿರ ರೂ. ಗಳನ್ನು ಖರ್ಚು ಮಾಡುತ್ತಿರುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಸೈಟ್‌ಗಳನ್ನು ಬಡವರಿಗೆ ಕೊಡುವಾಗ ಊರ ಹೊರಗಡೆ ಸ್ಮಸಾನದ ಹತ್ತಿರ ಕೊಡುತ್ತಿದ್ದೀರಿ. ಈ ರೀತಿ ಊರ ಹೊರಗಡೆ ಕೊಟ್ಟು ಹರಿಜನರನ್ನು ಇನ್ನೂ ಹರಿಜನರನ್ನಾಗಿಯೇ ಮಾಡುತ್ತಿದ್ದೀರಿ. ಅಲ್ಲಿ ಲೈಟ್, ನೀರು ಮತ್ತು ರಸ್ತೆ ಮೊದಲಾದ ಯಾವ ಸೌಕರ್ಯಗಳೂ ಇರುವುದಿಲ್ಲ. ಆದ್ದರಿಂದ

ಜನರು ಅಲ್ಲಿಗೆ ಹೋಗಿ ಮನೆ ಕಟ್ಟಿಸಿಕೊಂಡು ವಾಸ ಮಾಡಲು ಸಾಧ್ಯವಾಗುವುದಿಲ್ಲ. ಇದರ ಬದಲು ಊರ ಒಳಗಡೆಯೇ ಅವಕಾಶ ಮಾಡಿಕೊಟ್ಟರೆ ಈ ಜನರು ಬೇರೆ ಜನರ ಜೊತೆಯಲ್ಲಿ ಬಾಳ್ವೆ ಮಾಡಿಕೊಂಡು ಅವರ ಸಂಸ್ಕೃತಿಯನ್ನು ಸಹ ಕಲಿಯುವುದಕ್ಕೆ ಅವಕಾಶ ಸಿಗುತ್ತದೆಂದು ಹೇಳುತ್ತೇನೆ.

ಇನ್ನು ಸ್ಟೈಫಂಡ್ ಬಗ್ಗೆ ಹೇಳಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳಿಗೆ ೧೫೦ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಅವರು ಸಾಯುವವರೆಗೂ ಕೊಡುತ್ತೀರೋ ಅಥವಾ ಅವರಿಗೆ ೨೮ ವರ್ಷ ವಯಸ್ಸಾಗುವವರೆಗೆ ಮಾತ್ರ ಕೊಡುತ್ತಿರೋ? ೨೮ ವರ್ಷ ವಯಸ್ಸಾದ ಕೂಡಲೆ ಇದನ್ನು ನಿಲ್ಲಿಸಿಬಿಟ್ಟರೆ ಅವರು ಸತ್ತಂತೆ. ಆದ್ದರಿಂದ ಅವರಿಗೆ ಖಾಯಂ ಕೆಲಸ ಸಿಗುವವರೆಗೆ ಇದನ್ನು ಮುಂದುವರಿಸಿಕೊಂಡು ಹೋಗುತ್ತೀರಾ ಹೇಗೆ? ಈ ಬಗ್ಗೆ ನಿಮ್ಮ ನೀತಿಯನ್ನು ಸ್ಪಷ್ಟಪಡಿಸಬೇಕು.

ಇನ್ನು ಟ್ರಿಬ್ಯುನಲ್‌ಗಳಲ್ಲಿ ಮತ್ತು ಕಮಿಟಿಗಳಲ್ಲಿ ವಿರೋಧಪಕ್ಷದ ಸದಸ್ಯರನ್ನು ನೇಮಕ ಮಾಡುವಂತದ್ದನ್ನು ಕಂಪಲ್ಸರಿ ಮಾಡುವುದಕ್ಕೆ ನಿಮ್ಮ ಸೌಜನ್ಯವಿರಬೇಕು. ತಾವು ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತ್ತೀರಿ. ಆದಕಾರಣ ಯಾವುದೇ ಸಮಿತಿ ಇರಲಿ, ಒಂದೇ ಪಕ್ಷದವರು ಅದರಲ್ಲಿದ್ದರೆ, ಬಹುಶಃ ಅಲ್ಲಿನ ಕಾರ್ಯಕ್ರಮಗಳಲ್ಲಿ ಹೆಚ್ಚು ಕಡಿಮೆಯಾಗಬಹುದು. ತಾಳಮೇಳದಲ್ಲಿ ಹೆಚ್ಚು ಕಡಿಮೆಯಾಗಬಹುದು. ಆದಕಾರಣ ಅಲ್ಲಿ ವಿರೋಧಪಕ್ಷದವರೂ ಇದ್ದರೆ, ಅವರೇನಾದರು ತಪ್ಪು ಮಾಡಿದರೆ ಅದನ್ನು ಎತ್ತಿತೋರಿಸುವುದಕ್ಕೆ ಅವಕಾಶವಾಗುತ್ತದೆಂಬ ದೃಷ್ಟಿಯಿಂದ ನಮ್ಮ ಕಡೆಯವರಿಗೂ ಪ್ರಾತಿನಿಧ್ಯ ಕೊಡಬೇಕೆಂದು ಕೇಳುತ್ತಿದ್ದೇವೆಯೇ ಹೊರತು, ಏನೋ ನಮ್ಮ ಪಕ್ಷದ ಕಾರ್ಯಕರ್ತರಿಗೆ ಜಾಗ ಮಾಡಿಕೊಡಬೇಕೆಂಬ ದೃಷ್ಟಿಯಿಂದ ನಮ್ಮ ಘನಸರ್ಕಾರದವರನ್ನು ಕೇಳುತ್ತಿಲ್ಲ.

ಮಾನ್ಯ ಅಧ್ಯಕ್ಷರು ೩ ಸಲ ಘಂಟೆ ಬಾರಿಸಿದರು. ಆದ್ದರಿಂದ ಅವರ ಮಾತಿಗೆ ಮನ್ನಣೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

## Message from the Chairman L.C. Announced

MR. SPEAKER.—I have received the following message from the Chairman, Legislative Council as follows :

"Please refer your letter of 31st March, 1978 transmitting the Karnataka Co-operative Societies (Amendment) Bill, 1978 for the concurrence of the Legislative Council.

The Bill was taken up for consideration and all the clauses of the Bill were rejected by the House during the Clause by Clause consideration on 1st April, 1978."

Now, the House will adjourn to meet again at 9 A.M. tomorrow.

*The House adjourned at Fifty Minutes past Six of the Clock, to meet again at Nine of the Clock on Tuesday the 4th April 1978.*